

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 | Issue : 308 | Sunday 18-08-2024 | E-mail : maruti.b.hosamani76@gmail.com | Page: 4 | Price : Rs. 1/-


## "ಸ್ನೇಹ ಲೋಕ ನಿರ್ಮಾತೃ ನಿಜ ಮಿತ್ರ".....

ನಿತ್ಯ ಬಾಳಿನ ಬೆಳಕು
ಗೆಳತನ ಇರದ ಜೀವಿ ಇಲ್ಲ
ಬೇಧ ಭಾವ ಇರದ ಮನ
ಸಹಾಯ ಸೌಹಾರ್ದತೆ ಕುರೂಹು
ಜೀವ ಮಾನದ ಭಾವ ಸುಂದರ
ಅನುದಿನ ಜೋತೆ ಇರುವ ಸುಮನ
ನಿರ್ಭೀತಿಯ ನಿಯಮ ನೀತಿ
ನೋವು ನಿಗಿಸುವ ನಗು
ಕ್ಷಣಾರ್ಧ ಅನಿರೀಕ್ಷಿತ ಅತೀಥಿ
ಸ್ವಚ್ಛ ಮನದ ಮಲ್ಲಿಗೆ ಮಾತು
ವಿಳಂಬ ಇರದ ಮನದ ಸಿರಿ
ಆಗಿಂದಾಗ್ಗೆ ತಯಾರಿ ವೀರ
ಹಾಸ್ಯ ಲಾಸ್ಯದ ಶ್ರೀಮಂತ
ನಿತ್ಯ ಅನುಭವ ನಗೆ ಹನಿ
ತನು ಮನ ಆನಂದ ಚೇತನ
ಸುಂದರ ಲೋಕದ ಕಿರೀಟ ಪ್ರಾಯ
ಪರಸರ ಸ್ನೇಹಿ ಆರೋಗ್ಯ ಸ್ನೇಹಿ
ಜನ ಸ್ನೇಹಿ ಜಗವ ಮರೆಯದ
ಸ್ನೇಹವೇ ಬಾಳಿನ ಹರುಷ
ಮರೆಯದ ಜೀವನ ಸೌಹಾರ್ದತೆ
ಸ್ನೇಹಲೋಕ ನಿರ್ಮಾತೃ ನಿಜ ಮಿತ್ರ.



ದೇಶಂಸು
ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ
ಆರೋಗ್ಯ ನಿರೀಕ್ಷಣಾಧಿಕಾರಿ
ಬಾಗಲಕೋಟೆ

## ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎನ್.ಎಸ್.ಎಸ್ ಸ್ಕೌಟ್ ಆ್ಯಂಡ್ ಗೈಡ್ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ

**ಮನಗೂಳಿ :** ಬಸವನ ಬಾಗೇವಾಡಿ ತಾಲೂಕಿನ ಮನಗೂಳಿಯಲ್ಲಿ ದಿನಾಂಕ 16.08.2024 ರಂದು ಕ್ರೀಡೆ ಎನ್.ಎಸ್.ಎಸ್ ಸ್ಕೌಟ್ ಆ್ಯಂಡ್ ಗೈಡ್ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭವನ್ನು ಜೊತೆಗೆ ಅಂತಿಮ ವರ್ಷದ ಬಿ.ಎ/ಬಿ.ಕಾಂ ವಿದ್ಯಾರ್ಥಿಗಳನ್ನು ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಲಾಗಿತ್ತು,

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ರವಿಕುಮಾರ್ ಅರಳಿ ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು ಸರಕಾರಿ ಪ್ರಥಮ ದರ್ಜೆ ಕಾಲೇಜು ಝಳಕಿ. ಇವರು ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಸಾಧನೆ ಎಂಬುದು ಸಾಧಕನ ಸ್ವತ್ತು ಹೊರತು ಸೋಮಾರಿಯ ಸ್ವತ್ತು ಅಲ್ಲ, ಪ್ರತಿಯೊಬ್ಬ ವಿದ್ಯಾರ್ಥಿಯು ಸಂಸ್ಕಾರ ನೈತಿಕತೆ ಮಾನವೀಯ ಮೌಲ್ಯಗಳು ಬೆಳೆಸಿ ಕೊಳ್ಳಬೇಕು. ಜೊತೆಗೆ ಕೆಲಸದ ಬದಲಾವಣೆ ವಿಶ್ರಾಂತಿ ನಿರಂತರವಾಗಿ ಕೆಲಸ ಮಾಡುತ್ತಾ ದೇಶದ ಪ್ರಗತಿಗೆ ಯುವಜನರು ಕೊಡುಗೆಗಳನ್ನು ನೀಡಬೇಕು. ಮೌಲ್ಯಗಳೊಂದಿಗೆ ಬದುಕ



ಬೇಕು ಸಮಾಜಕ್ಕೆ ದೊಡ್ಡ ಆಸ್ತಿ ಆಗಬೇಕು ಸ್ವಾಭಿಮಾನದ ಬದುಕನ್ನು ರೂಡಿಸಿ ಕೊಳ್ಳಬೇಕು ಎಂಬ ವಿಚಾರಗಳನ್ನ ಅನೇಕ ದೃಷ್ಟಾಂತಗಳ ಮೂಲಕ ವಿವರಿಸಿದರು.

ಕಾಲೇಜಿನ ಅಭಿವೃದ್ಧಿ ಸಮಿತಿಯ ಸದಸ್ಯರಾದ ಶ್ರೀ ಚಂದ್ರಶೇಖರ್ ಗೌಡ ಪಾಟೀಲ್ ಅವರು ಮಾತನಾಡಿ ವಿದ್ಯಾರ್ಥಿಗಳ ಜೀವನದಲ್ಲಿ ಗುರುಗಳ ಪಾತ್ರ ಬಹಳ ಮಹತ್ವವಾದದ್ದು ಗ್ರಾಮದ ವಿದ್ಯಾರ್ಥಿಗಳು ಚಾರ್ಟೆಡ್ ಅಕೌಂಟೆಂಟ್ ಅಂತಹ ಪದವಿಯನ್ನು ಪಡೆದು ಕೊಳ್ಳುವ ಮೂಲಕ ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಗಿಟ್ಟಿಸಿ ಕೊಳ್ಳಬೇಕು ಯಾವ ಕ್ಷೇತ್ರದಲ್ಲಿ ಸ್ಪರ್ಧೆ ಕಡಿಮೆ ಇದೆಯೋ ಅಂತಹ ಜ್ಞಾನ ಮತ್ತು ಕೌಶಲ್ಯವನ್ನು ಪಡೆದು ಕೊಳ್ಳುವ ಮೂಲಕ ಜೀವನವನ್ನು ರೂಪಿಸಿ ಕೊಳ್ಳಬೇಕು ಎಂದು ತಿಳಿಸಿದರು.

ಶ್ರೀ ಅನಿಲ್ ಚೌಹಾನ್ ಇತಿಹಾಸ ಸಹಾಯಕ ಪ್ರಾಧ್ಯಾಪಕರು ಎಲ್ಲ ಉಪನ್ಯಾಸಕರ ಪರವಾಗಿ ವಿದ್ಯಾರ್ಥಿಗಳಿಗೆ ಆಶಯ ನುಡಿಗಳನ್ನು ತಿಳಿಸುತ್ತಾ ನಮಗೆ ಭಗವಂತ ಯಾವುದನ್ನ ಕೊಟ್ಟಿದ್ದಾನೆ ಅದರಲ್ಲಿ ಸಂತೃಪ್ತಿ ಸಂಭ್ರಮ ಪಡುವುದನ್ನ ಕಲಿಯಬೇಕು ನಮ್ಮ ಹಿಂದಿನ ಸಾಧನೆ ನಾವು ಮುರಿಯಬೇಕೆ ಹೊರತು ಇನ್ನೊಬ್ಬ ರೊಂದಿಗೆ ನಮ್ಮನ್ನು ಹೋಲಿಸಿ ಕೊಂಡು ಕೀಳರಮೆ ಪಡಬಾರದು ಎಂಬ ಚೇತುಹಾರಿ ಮಾತುಗಳನ್ನ ಬೋಧಿಸಿದರು.

ಅನೇಕ ಬಿ.ಎ ಮತ್ತು ಬಿ.ಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳು ತಮ್ಮ ಮೂರು ವರ್ಷದ ಪದವಿ ಜೀವನದಲ್ಲಿ ತಾವು ಕಂಡು ಉಂಡ ಅನುಭವಗಳ ಬುತ್ತಿಯನ್ನು ಸಭಿಕರ ಮುಂದೆ ಬಿಚ್ಚಿಟ್ಟು ಕಾವ್ಯಮಯವಾಗಿ ತಮ್ಮ ಗುರುಗಳಿಗೆ ನುಡಿ ನಮನಗಳನ್ನು ತಿಳಿಸಿದರು ಜೊತೆಗೆ ಕಾಲೇಜಿಗೆ ಕಿರು ಕಾಣಿಕೆಗಳನ್ನು ಸಲ್ಲಿಸಿದರು.

ಶ್ರೀಮತಿ ನಂದಿನಿ ಸಿ.ಎಸ್ ಕನ್ನಡ ಸಹಾಯಕ ಪ್ರಾಧ್ಯಾಪಕರು ಇಡೀ ವರ್ಷದುದ್ದಕ್ಕೂ ಕಾಲೇಜಿನಲ್ಲಿ ಕೈಗೊಂಡ ಕಾರ್ಯ ಚಟುವಟಿಕೆಗಳ ವರದಿಯನ್ನು ವಾಚನ ಮಾಡಿದರು.. ಹಾಗೂ ಅಧ್ಯಕ್ಷತೆಯನ್ನು ವಹಿಸಿಕೊಂಡ ಸಚಿನ್ ಕುಮಾರ್ ಪಾಟೀಲ್ ಅವರು ಸಚಿನ್ ತೆಂಡೂಲ್ಕರ್, ಹುಂಡೈ ಅನೇಕ ಸಾಧಕರು ತಮ್ಮ ಅಸಂಖ್ಯಾತ ಪ್ರಯತ್ನಗಳ ಫಲವಾಗಿ ಅದ್ಭುತವಾದದ್ದನ್ನು ಸಾಧಿಸಿದ್ದಾರೆ ಪ್ರಯತ್ನಗಳಲ್ಲಿ ಸೋಲಾಗಬಹುದು ಆದರೆ ಪ್ರಯತ್ನ ಮಾಡದೆ ಸೋತು ಕೈಕಟ್ಟಿ ಕುಳಿತು ಕೊಳ್ಳಬಾರದು "ಪ್ರಯತ್ನವೇ ಪುರುಷಾರ್ಥ" ಎಂದು ವಿದ್ಯಾರ್ಥಿಗಳಿಗೆ ಪ್ರೇರಣದಾಯಕ ವಿಚಾರಗಳನ್ನ ತಿಳಿಸಿದರು.ಕುಮಾರಿ ಜ್ಯೋತಿ ಹಿಟ್ನಳ್ಳಿ ನಿರೂಪಣೆ ಮಾಡಿದರು, ಶ್ರೀಶೈಲ್ ಕುಂಬಾರ್ ವಿದ್ಯಾರ್ಥಿ ಸ್ವಾಗತ ಪರಿಚಯ ಕುಮಾರಿ ಪವಿತ್ರ ಪ್ರಾರ್ಥನ ಗೀತೆಯನ್ನು ಹೇಳಿದರು ದಾನಮ್ಮ ತಪಸಟ್ಟಿ ವಿದ್ಯಾರ್ಥಿನಿ ವಂದನಾರ್ಪಣೆಯನ್ನು ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಕಾಲೇಜಿನ ಎಲ್ಲ ಬೋಧಕ ಬೋಧಕೇತರ ಸಿಬ್ಬಂದಿ ಎಲ್ಲ ವಿದ್ಯಾರ್ಥಿಗಳು ಸಿಡಿಸಿ ಸದಸ್ಯರು ಹಾಜರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ.ಇಲಕಲ್ಲ.**

## ಎನ್‌ಹೆಚ್‌ಎಂ ಒಳಗುತ್ತಿಗೆ ನೌಕರರನ್ನು ಖಾಯಂಗಾಗಿ ಆಗ್ರಹಿಸಿ ಕಪ್ಪು ಪಟ್ಟಿಯೊಂದಿಗೆ ಮುಷ್ಕರ

**ಕಲಕೇರಿ :** ತಾಳಿಕೋಟೆ ತಾಲೂಕಿನ ಕಲಕೇರಿ ಗ್ರಾಮದಲ್ಲಿ ಇಂದು ಸಮುದಾಯ ಆರೋಗ್ಯ ಕೇಂದ್ರ ಕಲಕೇರಿಯಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ದಡಿಯಲ್ಲಿ ಒಳಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ವೈದ್ಯರು, ಪ್ರಯೋಗಶಾಲೆ ಸಿಬ್ಬಂದಿ, ಆಪ್ತ ಸಮಾಲೋಚಕರು, ಶ್ರುಶೂಷಕರು, ಹಾಗೂ ಇತರೆ ಸಿಬ್ಬಂದಿಗಳು "ಸೇವೆ ಖಾಯಂ ಮಾಡುವಂತೆ ಆಗ್ರಹಿಸಿ" ಕಪ್ಪುಪಟ್ಟಿ ಕಟ್ಟಿಕೊಂಡು ಶನಿವಾರ ಮುಷ್ಕರ ನಡೆಸಿದರು ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಪ್ರಣಾಳಿಕೆಯಲ್ಲಿ ಎನ್.ಹೆಚ್.ಎಮ್ ಒಳಗುತ್ತಿಗೆ ನೌಕರರನ್ನು ಖಾಯಂ ಗೊಳಿಸುವ ಭರವಸೆ ನೀಡಿದರು. ನಮಗೆ ಸೇವಾ ಭದ್ರತೆ ಇಲ್ಲವಾಗಿದ್ದು. ಇದರಿಂದ ನಮಗೆ ತೊಂದರೆ ಯಾಗಿದೆ. ರಾಜ್ಯದಲ್ಲಿ ಸುಮಾರು 28256 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕಲಕೇರಿಯಲ್ಲಿ 15 ಜನ ಸಿಬ್ಬಂದಿ ಒಳಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ ಸುಮಾರು ವರ್ಷಗಳಿಂದ ನಮ್ಮ ಏಕೈಕ ಬೇಡಿಕೆ ಎನ್.ಹೆಚ್.ಎಂ ನೌಕರರನ್ನು ಖಾಯಂ ಮಾಡಬೇಕೆಂದು ಈ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ ಎಂದು ಅಪ್ಪಸಾಬ ಮಾಂಗ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ಶಿವಕುಮಾರ್ ತುಗ–ಗ್ಣಿ, ಆಸೀಫ್ ನದಾಫ್, ಸಂಗೀತಾ ಪಾಸೋಡಿ, ಭಾಗ್ಯಶ್ರೀ ಬೂದಿಹಾಳ, ಲಕ್ಷ್ಮೀ ಮಾಂಗ್, ಅನ್ನಮ್ಮ ನ್ಯಾಕೋಡಿ, ಸುಶ್ಮಿತಾ, ಅನಿತಾ, ಆರತಿ ಮತ್ತು ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ.ತಾಳಿಕೋಟೆ**




## ಯುವ ಪೀಳಿಗೆಗೆ ಗ್ರಾಮೀಣ ಕ್ರೀಡೆಗಳನ್ನು ಪರಿಚಯಿಸಬೇಕಾಗಿದೆ

**ರಬಕವಿ ಬನಹಟ್ಟಿ :** ಗ್ರಾಮೀಣ ಕ್ರೀಡೆಗಳು ಪ್ರತಿಯೊಬ್ಬರಿಗೂ ಮಹತ್ವದ ಕ್ರೀಡೆ ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು. ಅವರು ತಾಲೂಕಿನ ನಾವಲಗಿ ಗ್ರಾಮದಲ್ಲಿ ಚಂದ್ರಗಿರಿ ದೇವಿಯ ಹಾಗೂ ಶ್ರೀ ಸದಾಶಿವ ಮುತ್ಯಾನ ಜಾತ್ರೆಯ ನಿಮಿತ್ಯ ಜರುಗಿದ ತೆರೆಬಂಡಿ ಸ್ಪರ್ಧೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ರೈತರ ಜೀವನಾಡಿಯಾಗಿರುವ ಗ್ರಾಮೀಣ ಕ್ರೀಡೆಗಳು ಇಂದಿನ ಆಧುನಿಕ ಯುಗದ ಭರಾಟೆಯಲ್ಲಿ ಮರೆಯಾಗುತ್ತಿವೆ. ಇಂತಹ ಕ್ರೀಡೆಗಳನ್ನು ಆಯೋಜನೆ ಮಾಡುವ ಮೂಲಕ ಯುವ ಪೀಳಿಗೆಗೆ ಅವುಗಳನ್ನು ಪರಿಚಯಿಸಬೇಕಾಗಿದೆ. ಈ ಗ್ರಾಮದಲ್ಲಿ ಕಲೆಯಷ್ಟೇ ಪ್ರಾಮುಖ್ಯತೆಯನ್ನು ಕ್ರೀಡೆಗೂ ನೀಡುತ್ತಿರುವುದು ನಿಜಕ್ಕೂ ಸಂತಸದ ಸಂಗತಿ ಎಂದರು.

ಈ ಸಂದರ್ಭದಲ್ಲಿ ಧರೆಪ್ಪ ಉಳ್ಳಾಗಡ್ಡಿ, ಲಕ್ಷ್ಮಣ ಸವದಿ, ಆನಂದ ಕಂಪು, ದಾನಪ್ಪ ಆಸಂಗಿ, ಹಣಮಂತ ಸವದಿ, ಮಹಾಂತೇಶ ಬಿದರಿ, ಗುರು ಮರಡಿಮಠ, ಗೋವಿಂದ ಪಾಟೀಲ, ಅಲ್ಲಪ್ಪ ಮುಗಳಖೋಡ, ಹಣಮಂತ ಲೆಂಡಿ, ಬಸವರಾಜ ಗಣಿ, ಈರಪ್ಪ ಕಡಕಬಾವಿ, ಗಂಗಪ್ಪ ಅಮ್ಮಲ್ಲಜೇರಿ, ಮುತ್ತಪ್ಪ ಅಂಗಡಿ ಸೇರಿದಂತೆ ಇನ್ನುಳಿದ ಕಮೀಟಿ ಹಿರಿಯರು ಉಪಸ್ಥಿತರಿದ್ದರು.

## ಶ್ರವಣ ಮಾಡುವುದೆ ಶ್ರಾವಣ ಮಾಸದ ಮಹತ್ವದ್ದಾಗಿದೆ



**ರಬಕವಿ :** ಧರ್ಮದ ಮಾರ್ಗಕ್ಕೆ ತೆಗೆದುಕೊಂಡು ಹೋಗುವ, ಮನಸ್ಸಿಗೆ ಶಾಂತಿಯನ್ನು ನೀಡುವ, ಮನೋವಿಕಾಸ, ಆತ್ಮವಿಕಾಸದ ಮಾತುಗಳನ್ನು ಕೇಳುವುದು, ನಮ್ಮ ಸಂಸ್ಕೃತಿ ಹಾಗೂ ಸಂಸ್ಕಾರ ಕುರಿತು ಶ್ರವಣ ಮಾಡುವುದೇ ಶ್ರಾವಣ ಮಾಸದ ಮಹತ್ವವಾಗಿದೆ ಎಂದು ಇಲ್ಲಿಯ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ನುಡಿದರು.

ಅವರು ಶುಕ್ರವಾರ ಇಲ್ಲಿನ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಶ್ರಾವಣ ಮಾಸದ ಅಂಗವಾಗಿ ನವಲಗುಂದದ ಅಜಾತ ನಾಗಲಿಂಗ ಶಿವಯೋಗಿಗಳ ಕುರಿತು ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹನ್ನೆರಡನೆ ಶತಮಾನದಲ್ಲಿ ಬಸವಣ್ಣನವರು ಕಲ್ಯಾಣದಲ್ಲಿ ಕೈಲಾಸವನ್ನು ನಿರ್ಮಾಣ ಮಾಡಿದ್ದರು. 19 ನೇ ಶತಮಾನದಲ್ಲಿ ಸಿದ್ಧಾರೂಢರು ಹುಬ್ಬಳ್ಳಿಯಲ್ಲಿ ಕಲ್ಯಾಣವನ್ನು ನಿರ್ಮಾಣ ಮಾಡಿದರು. ಶಿವನ ಸ್ವರೂಪಿಯಾದ ಸಿದ್ಧಾರೂಢರು ಮತ್ತು ದೇವಿ ಸ್ವರೂಪಿಯಾದ ನಾಗಲಿಂಗರು ಜಗದ ಉದ್ಧಾರಕ್ಕಾಗಿ ಧರೆಗೆ ಇಳಿದು ಬಂದವರು. ಭವಕ್ಕೆ ಅಂಟಿಕೊಳ್ಳದವರೇ ಅಜಾತರು. ನವಲಗುಂದದ ನಾಗಲಿಂಗರು ಅಂಥ ಅಜಾತರಾಗಿದ್ದರು. ಮಹಾತ್ಮರ ಚರಿತ್ರೆಗಳನ್ನು ಕೇಳುವುದರಿಂದ, ಅವರ ಸಂದೇಶಗಳನ್ನು ಜೀವನದಲ್ಲಿ ಅವಳವಡಿಸಿ ಕೊಳ್ಳುವುದರಿಂದ ಜೀವನದಲ್ಲಿ ಪುಣ್ಯದ ಜೊತೆಗೆ ಮೋಕ್ಷ ಪಾಪ್ತಿಯಾಗುತ್ತದೆ ಎಂದು ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

ನಿವೃತ್ತ ಉಪನ್ಯಾಸಕ ಶಿವಾನಂದ ದಾಶಾಳ ಮಾತನಾಡಿ ಸಿದ್ಧಾರೂಢರು, ಶಿಶುನಾಳ ಶರೀಫರು, ಗರಗದ ಮಡಿವಾಳಪ್ಪನವರು, ಕಡಕೋಳ ಮಡಿವಾಳಪ್ಪನವರು, ನವಲಗುಂದದ ನಾಗಲಿಂಗರು 18 ಮತ್ತು 19 ನೇ ಶತಮಾನದ ಮಹಾನ್ ಶ್ರೇಷ್ಠರು. ಇದು ಕರ್ನಾಟಕದ ಆಧ್ಯಾತ್ಮಿಕ ಕ್ಷೇತ್ರದ ಮಹತ್ವದ ಕಾಲಘಟ್ಟವಾಗಿತ್ತು ಎಂದರು.

ಪ್ರಭುಲಿಂಗೇಶ್ವರ ಮತ್ತು ಮಹಾಲಕ್ಷ್ಮಿ ಭಜನಾ ಮಂಡಳದವರು ಭಜನಾ ಕಾರ್ಯಕ್ರಮವನ್ನು ನೆರವೇರಿಸಿದರು.

ಮಹಾದೇವ ಕವಿಶೆಟ್ಟಿ, ಬುದ್ದಪ್ಪ ಕುಂದಗೋಳ, ಮುರಿಗೆಪ್ಪ ಮಿರ್ಜಿ, ಈಶ್ವರ ಪರಮಶೆಟ್ಟಿ, ದಾನಪ್ಪ ಬಾಗಲಮನಿ, ಶಿವಾನಂದ ಮಟ್ಟಿಕಲ್ಲಿ, ಮಾರುತಿ ಗಂಥಡೆ, ವಿರುಪಾಕ್ಷಿ ಹಿರೇಮಠ, ಪ್ರಕಾಶ ಮೋಟಗಿ, ಸೋನಾರ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ಸರ್ಕಾರ ನೇಕಾರ ಸಮ್ಮಾನ ಯೋಜನೆ ಜಾರಿಗೆ ತರಲಿ

**ರಬಕವಿ–ಬನಹಟ್ಟಿ :** ಕೇಂದ್ರ ಸರ್ಕಾರ ಕಿಸಾನ ಸಮ್ಮಾನ ಯೋಜನೆಯಂತೆ ನೇಕಾರ ಸಮ್ಮಾನ ಯೋಜನೆಯನ್ನು ಜಾರಿಗೆ ತರುವುದರ ಮೂಲಕ ರೈತರಂತೆ ನೇಕಾರರಿಗೂ ಕೂಡಾ ಪ್ರೋತ್ಸಾಹ ಧನ ನೀಡಬೇಕು. ಪ್ರಧಾನಿ ಮೋದಿಯವರು ವಾರಣಾಸಿಯನ್ನು ದತ್ತು ಪಡೆದುಕೊಂಡು ನೇಕಾರಿಕೆಯನ್ನು ಅಭಿವೃದ್ಧಿ ಮಾಡಿದಂತೆ ರಾಜ್ಯವನ್ನು ಕೂಡಾ ದತ್ತು ಪಡೆದುಕೊಂಡು ಇಲ್ಲಿನ ನೇಕಾರರನ್ನು ಮತ್ತು ನೇಕಾರಿಕೆಯನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ಅಧ್ಯಕ್ಷ ಶಿವಲಿಂಗ ಟಿರಕಿ ತಿಳಿಸಿದರು.



ಅವರು ಶನಿವಾರ ಇಲ್ಲಿನ ಕೆ. ಎಚ್. ಡಿ. ಸಿ. ಕಾಲೊನಿಯಲ್ಲಿ ಹತ್ತನೆಯ ರಾಷ್ಟ್ರೀಯ ನೇಕಾರ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಹಿರಿಯ ನೇಕಾರರನ್ನು ಸನ್ಮಾನಿಸಿ ಮಾತನಾಡಿದರು.

ರಾಜ್ಯ ಸರ್ಕಾರ ನೇಕಾರ ಗ್ರಾಮಗಳನ್ನು ನಿರ್ಮಾಣ ಮಾಡಬೇಕು. ನೇಕಾರರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ರೈಲು, ವಿಮಾನ ನಿಲ್ದಾಣಗಳಲ್ಲಿ ಮಾರಾಟ ಮಳಿಗೆಗಳನ್ನು ತೆರೆಯುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಕೆ. ಎಚ್. ಡಿ. ಸಿ. ಆರಂಭಗೊಂಡಾಗ ರಾಜ್ಯದಲ್ಲಿ 48 ಸಾವಿರ ನೇಕಾರರಿದ್ದರು. ಆದರೆ ಇಂದು ಕೇವಲ ನಾಲ್ಕು ಸಾವಿರ ನೇಕಾರರು ಉಳಿದಿದ್ದಾರೆ. ನೇಕಾರರನ್ನು ಮತ್ತು ನೇಕಾರಿಕೆಯ ಉದ್ಯೋಗವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ನೇಕಾರರ ಸಮಸ್ಯೆಗಳನ್ನು ಆಲಿಸಿ ಅವುಗಳಿಗೆ ಪರಿಹಾರ ನೀಡಬೇಕು. ನೇಕಾರರಿಗೆ ಕಾರ್ಮಿಕ ಯೋಜನೆಗಳು ದೊರೆಯವಂತಾಗಲಿ. ನೇಕಾರರ ಸಾಲವನ್ನು ಸರ್ಕಾರ ಮನ್ನಾ ಮಾಡಬೇಕು ಎಂದು ಶಿವಲಿಂಗ ಟಿರಕಿ ತಿಳಿಸಿದರು.


ಶಿಕ್ಷಕ ಬಿ. ಎಂ. ಪಾಟೀಲ, ನೇಕಾರ ಮುಖಂಡ ಸದಾಶಿವ ಗೊಂದಕರ ಮಾತನಾಡಿದರು. ಲವಪ್ಪ ಮರಾಠೆ, ನಾಗಪ್ಪ ಬಾವಲತ್ತಿ, ಶಂಕರ ಕೊಣ್ಣೂರ, ರಘುನಾಥ ಪೊರೆ, ಹಜರತ್ ಮುಲ್ಲಾ, ನೂರಜಾನ್ ಮೊಮಿನ್, ಪಂಡಿತಪ್ಪ ಹಟ್ಟಿ, ಮಹೇಂದ್ರ ಕವಿಶೆಟ್ಟಿ, ಅಕ್ಬರ್ ಜಮಾದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ತನುಶ್ರೀ ಸಾಹಿತ್ಯ ವೇದಿಕೆ ವತಿಯಿಂದ ರಾಜ್ಯ ಮಟ್ಟದ 13 ನೇ. ಆನ್ಲೈನ್ ಕವಿ ಗೋಷ್ಠಿ ಕಾರ್ಯಕ್ರಮ

**ಚಿತ್ರದುರ್ಗ :** ತನುಶ್ರೀ ಸಾಹಿತ್ಯ ಸಾಂಸ್ಕೃತಿಕ ಕಲಾ ವೇದಿಕೆ, ಚಿತ್ರದುರ್ಗ ಇವರ ವತಿಯಿಂದ ದಿನಾಂಕ : 15/08/2024 ರಂದು ಆಗಸ್ಟ್ 15 ರ 78 ನೇಯ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ರಾಜ್ಯ ಮಟ್ಟದ ಆನ್ಲೈನ್ ಕವಿ ಗೋಷ್ಠಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವು ರಾಷ್ಟ್ರ ಗೀತೆಯೊಂದಿಗೆ ಆರಂಭವಾಯಿತು ನಂತರ ತನುಶ್ರೀ ಸಾಹಿತ್ಯ , ಸಾಂಸ್ಕೃತಿಕ ಕಲಾ ವೇದಿಕೆ ಚಿತ್ರದುರ್ಗ, ಇದರ ರಾಜ್ಯಾಧ್ಯಕ್ಷರು ಹಾಗೂ ಪ್ರಕಾಶಕರು ಆದ ಶ್ರೀಯುತ ರಾಜು.ಎಸ್ ಕವಿ ಸೋಲೇನಹಳ್ಳಿ ರವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ನಾವು ಇಂದು ಸ್ವಾತಂತ್ರ್ಯ ದಿನಾಚರಣೆ ಆಚರಿಸುತ್ತಿದ್ದೇವೆ ಎಂದರೆ ಇದರ ಹಿಂದೆ ಅದೆಷ್ಟು ಸ್ವಾತಂತ್ರ್ಯ ಹೋರಾಟಗಾರರ ಜೀವಗಳ ಶ್ರಮ ಮತ್ತು ಅವರ ಬೆವರ ಹನಿಗಳು ಇದಕ್ಕೆ ಸಾಕ್ಷಿ ಎಂದರೆ ತಪ್ಪಾಗಲಾರದು, ಇಂದಿನ ಯುವಕರು ಕಲೆ ಸಾಹಿತ್ಯ ಸಂಸ್ಕೃತಿ ನಮ್ಮ ಕನ್ನಡ ನಾಡು ನುಡಿ, ದೇಶ ಪ್ರೇಮವನ್ನು ಬೆಳಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ತುಮಕೂರಿನ ವಿಚಾರ ಮಂಟಪ ವೇದಿಕೆಯ ಅಧ್ಯಕ್ಷರಾದ ಶ್ರೀಯುತ ವರುಣ್ ರಾಜ್ ರವರು ಮಾತನಾಡಿ ನಮಗೆ ಸ್ವಾತಂತ್ರ್ಯ ಸಿಕ್ಕಿರುವುದು ನೆಪ ಮಾತ್ರ ಅಷ್ಟೇ ಇನ್ನೂ ನಾವೆಲ್ಲರೂ ಪೂರ್ಣ ಸ್ವತಂತ್ರರಲ್ಲ ಯಾಕೆಂದರೆ ದೇಶದಲ್ಲಿ ನಡೆಯುತ್ತಿರುವ ಕೊಲೆ ಸುಲಿಗೆ, ದರೋಡೆ, ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ಅತ್ಯಾಚಾರಗಳು ದಿನ ನಿತ್ಯ ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ನೋಡುತ್ತಿದ್ದರೆ ನಾವೆಲ್ಲಾ ಸ್ವತಂತ್ರರೇ ಎಂದು ಕಳವಳ ವ್ಯಕ್ತಪಡಿಸಿದರು.

ನಂತರ ಮತ್ತೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಚಳ್ಳಕೆರೆಯ ಯುವ ಕವಯಿತ್ರಿ ಹಾಗೂ ವಿಮರ್ಶಕರು ಆದ ಶ್ರೀಮತಿ ಶಬ್ರಿನಾ ಮಹಮದ್ ಅಲಿ ರವರು ಮಾತನಾಡಿ ಇತ್ತೀಚಿನ ದಿನಗಳಲ್ಲಿ ಯುವ ಜನತೆ ಸಾಹಿತ್ಯ ಸಂಸ್ಕೃತಿ ಸ್ತ್ರೀಯರಿಗೆ ಗೌರವವನ್ನು ನೀಡುವುದು ಮತ್ತು ಪುಸ್ತಕಗಳನ್ನು ಕೊಂಡು ಓದುವ ಹವ್ಯಾಸ ಬೆಳೆಸಿ ಕೊಂಡು ಸಮಾಜದಲ್ಲಿ ಉತ್ತಮ ಪ್ರಜೆಗಳಾಗ ಬೇಕು, ನಮಗೆ ಸ್ವಾತಂತ್ರ್ಯ ಎಷ್ಟು ಮುಖ್ಯ ಎಂಬುದು ಒಂದು ಪಕ್ಷಿಯ ಕಥೆಯೊಂದಿಗೆ ವಿವರಿಸಿದರು ಇದು ಕೇಳುಗರ ಮನ ಕಲುಕುವಂತಿತ್ತು.




ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಚಿತ್ರದುಗ–ರ್ಗದ ವಿಮರ್ಶಕರು ಮತ್ತು ಸಮಾಜ ಮುಖಿ ಚಿಂತಕರು ಆದ ಶ್ರೀಯುತ ಮಲ್ಲಿಕಾರ್ಜುನ್ ತಾಳ್ಯ ರವರು ಮಾತನಾಡಿ ಇತ್ತೀಚಿನ ಯುವ ಕವಿಗಳಲ್ಲಿ ಕವಿತೆಗಳನ್ನು ಬರೆಯುವಾಗ ತನ್ನದೇ ಆದ ಸತ್ವ ಮತ್ತು ಸಂಸ್ಕೃತಿ ನಮ್ಮ ಕನ್ನಡ ನಾಡು ನುಡಿ ಭಾಷೆ ಸಾಹಿತ್ಯ ಜಾನಪದಕ್ಕೆ ಸಾಹಿತ್ಯಗಳಿಗೆ ಹೆಚ್ಚೆಚ್ಚು ಆದ್ಯತೆ ನೀಡಬೇಕು.

ಸುಮಾರು ಐವತ್ತು ಕವಿಗಳ ಸ್ವ ರಚಿತ ಕವನ ವಾಚನ ಗಳನ್ನು ಆಲಿಸಿ ವಿಮರ್ಶಿಸಿ ಅವರ ಸರಿ ತಪ್ಪುಗಳನ್ನು ತಿದ್ದಿ ತೀಡಿ ಇನ್ನೂ ಯಾವ ರೀತಿಯ ಕವನಗಳನ್ನು ರಚಿಸ ಬೇಕು ಮತ್ತು ವಾಚಿಸ ಬೇಕು ಎಂಬುದರ ಬಗ್ಗೆ ಸವಿಸ್ತಾರವಾಗಿ ತಿಳಿಸಿ ಕೊಟ್ಟರು.

ಈ ರಾಜ್ಯ ಮಟ್ಟದ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಐವತ್ತುಕ್ಕೂ ಹೆಚ್ಚು ಕವಿಗಳು ಹಾಗೂ ಕವಯಿತ್ರಿಯರು ತಮ್ಮ ಸ್ವ ರಚಿತ ಕವನಗಳನ್ನು ವಾಚಿಸಿದರು,

ಚಿದಾನಂದ ಮೂರ್ತಿ.ಎಂ ನೇರ್ಲಹಳ್ಳಿ ರವರು ಸ್ವಾಗತಿಸಿದರು, ಸಾಹಿತಿಗಳು ಆದ ಶ್ರೀಮತಿ ಸಾವಿತ್ರಿ.ಕೆ.ಬಿ ರವರು ಕಾರ್ಯಕ್ರಮ ನಿರೂಪಿಸಿದರು, ದಲಿತ ಸಾಹಿತ್ಯ ಪರಿಷತ್, ಚಿತ್ರದುರ್ಗ ಜಿಲ್ಲೆಯ ಜಿಲ್ಲಾಧ್ಯಕ್ಷರು ಆದ ಶ್ರೀಯುತ ಶಿವಮೂರ್ತಿ.ಟಿ.ಕೋಡಿಹಳ್ಳಿ ವಂದಿಸಿದರು. ಒಟ್ಟಾರೆಯಾಗಿ ಎಲ್ಲರ ಸಹಕಾರದೊಂದಿಗೆ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿತು.

**ವರದಿ: ಕೋಡಿಹಳ್ಳಿ.ಟಿ.ಶಿವಮೂರ್ತಿ.ಚಿತ್ರದುರ್ಗ**

# ‘ಇಂದಿನ ಸ್ತ್ರೀ’ ಅಭಿಪ್ರಾಯ ಮಂಡನೆ ಕಾರ್ಯಕ್ರಮಕ್ಕೆ ಚಾಲನೆ



**ಧಾರವಾಡ :** ಮಹಿಳೆಯರನ್ನು ಇಂದಿಗೂ ಎರಡನೇ ದರ್ಜೆಯ ಪ್ರಜೆಯಂತೆ ಸಾಮಾಜಿಕ ವ್ಯವಸ್ಥೆ ಪರಿಗಣಿಸುತ್ತಿರುವುದು ಬದಲಾಗದೇ ಹೋದರೆ ದೇಶದ ಪ್ರಗತಿಗೆ ಮಾರಕವಾಗುವುದು ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಹೇಳಿದರು.
ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ ಮಂಟಪವು, ಶ್ರೀ ಸತ್ಯಸಾಯಿ ಮಹಿಳಾ ಕಾಲೇಜು ಸಹಯೋಗದಲ್ಲಿ, ಕಾಲೇಜಿನ ಸಭಾಭವನದಲ್ಲಿ ಆಯೋಜಿಸಿದ್ದ ‘ಇಂದಿನ ಸ್ತ್ರೀ’ ಅಭಿಪ್ರಾಯ ಮಂಡನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದರು.
ಅವರು ಮುಂದುವರೆದು ಮಾತನಾಡುತ್ತಾ, ದೇಶದಜನಸಂಖ್ಯೆಯಲ್ಲಿಅರ್ಧದಷ್ಟಿರುವ ಮಹಿಳೆಯರು ಇಂದು ಎಲ್ಲ ರಂಗದಲ್ಲೂ ಪ್ರಗತಿಯನ್ನು ಸಾಧಿಸುತ್ತಿದ್ದರೂ ನ್ಯಾಯಬದ್ಧವಾಗಿ ಸಿಗಬೇಕಾದ ಗೌರವ, ಸ್ಥಾನಮಾನ, ಅವಕಾಶಗಳಿಂದ ವಂಚಿತವಾಗುತ್ತಿದ್ದಾಳೆ. ಗ್ರಾಮೀಣ ಮಹಿಳೆ ಪುರುಷನಗಿಂತಲೂ ಹೆಚ್ಚು ಕೆಲಸ ಮಾಡುತ್ತಿದ್ದರೂ ಅವಳಿಗೆ ನೀಡುವ ಹಣ ಪುರುಷರಿಗಿಂತ ಕಡಿಮೆ.ಇಂಥ ಹಲವು ತಾರತಮ್ಯಗಳನ್ನು ಇಂದಿನ ಮಹಿಳೆಯರು ಯಾಕೆ ಹೀಗೆ ಎಂದು ಅವಲೋಕಿಸಬೇಕು. ಈಅಸಮಾನತೆವಿರುದ್ಧಧ್ವನಿಎತ್ತಬೇಕಾಗಿದೆ. ಗಾಂಧೀಜಿಯವರು ಹೇಳಿದಂತೆ ಮಧ್ಯರಾತ್ರಿಯಲ್ಲಿ ಮಹಿಳೆ ನಿರ್ಭಯದಿಂದ ಯಾವಾಗ ನಡೆದಾಡುತ್ತಾಳೋ ಆವಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಸಿಕ್ಕಂತೆ ಎಂದಂತೆ ಇಂದಿಗೂ ಮಹಿಳೆಗೆ ನಿಜವಾದ ಸ್ವಾತಂತ್ರ್ಯದೊರೆತಿಲ್ಲ. ಹಾಡು ಹಗಲೇ ಮಹಿಳೆಯರ ಕೊಲೆಗಳಾಗುತ್ತಿವೆ, ಅತ್ಯಾಚಾರಗಳಾಗುತ್ತಿವೆ. ಇಂಥ ವಿಷಮ ಸ್ಥಿತಿಯಲ್ಲಿ ಯುವತಿಯರು ಎಚ್ಚೆತ್ತುಕೊಳ್ಳಬೇಕಿದೆ.ರಾಜಕೀಯ, ಆರ್ಥಿಕ, ಸಾಮಾಜಿಕರಂಗದಲ್ಲಿ ಮಹಿಳೆಗೆ ಸಿಗಬೇಕಾದ ಅವಕಾಶಗಳನ್ನು ಗಟ್ಟಿಧ್ವನಿಯಲ್ಲಿ ಕೇಳಬೇಕು ಎಂದು ಹೇಳಿದ ಹಲಗತ್ತಿ, ಯುವತಿಯರಿಗೆ ಕಿವಿಮಾತು ಹೇಳುತ್ತಾಮನೆಯಲ್ಲಿಮೊದಲುಲಿಂಗಭೇದ ಮಾಡುತ್ತಿರುವುದನ್ನು ವಿರೋಧಿಸಬೇಕು. ಗಂಡಿನಷ್ಟೆ ಹೆಣ್ಣುಎಲ್ಲರೀತಿಯಿಂದಲೂ ಸಮರ್ಥಗಳು ಎಂಬ ವಾತಾವರಣ ಪ್ರತಿಕುಟುಂಬದಲ್ಲಿ ಬರುವಂತೆ ಆಗಬೇಕು. ಹೆಣ್ಣು ಅಬಲೆ, ಅಶಕ್ತಳು ಎಂದು ಅವಳಿಗೆ ಹೇಳಿ ಹೇಳಿ ಮಾನಸಿಕವಾಗಿ ಕುಣಿಸುತ್ತಾ ಬಂದಿದ್ದಾರೆ. ಇನ್ನುಅದು ನಿಲ್ಲಬೇಕು. ಮಹಿಳೆ ಗಂಡಿನಷ್ಟೆ ಸಶಕ್ತಳು ಎಂಬ ಮಾತುಗಳು ಹೆಚ್ಚು ಹೆಚ್ಚು ಕೇಳಿಬರಬೇಕು ಎಂದರು.
ಸಂಪನ್ಮೂಲ ವ್ಯಕ್ತಿಡಾ. ವಿ. ಶಾರದಾಅಭಿಪ್ರಾಯ ಮಂಡಿಸುತ್ತಾ, ಇಂದಿನ ಮಹಿಳೆ ತಂತ್ರಜ್ಞಾನದ ಮುನ್ನಡೆಯಿಂದಾಗಿ ಸಾಕಷ್ಟು ಕ್ಲಿಷ್ಟಕರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದ-ರಿಂದ ಹೊರಬರಲು ಇಂದಿನ ಸ್ತ್ರೀಯರು ಗಟ್ಟಿಗಿತ್ತಿಯರಾಗಿತಮ್ಮ ಸ್ವಂತಿಕೆಯನ್ನು ಕಾಯ್ದುಕೊಳ್ಳಬೇಕೆಂದರು.
ಇನ್ನೋರ್ವ ಸಂಪನ್ಮೂಲ ವ್ಯಕ್ತಿಡಾ.ಅರುಣಾ ಹಳ್ಳಿಕೇರಿ ಮಾತನಾಡುತ್ತಾ, ಇಂದಿನ ಮಹಿಳೆ ಅತ್ಯಂತ ತಾಳ್ಮೆಯಿಂದ ತನಗೆ ಬಂದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮ ಸಮಾಜದಲ್ಲಿಕುಟುಂಬ ವ್ಯವಸ್ಥೆ ಹಾಳಾಗುತ್ತದೆಂದು ಹೇಳಿದರು.
ಮತ್ತೋರ್ವ ಸಂಪನ್ಮೂಲ ವ್ಯಕ್ತಿ ಶಾರದಾ ಕೌದಿ ಅವರು, ಬಸವಣ್ಣನವರಕಾಲದಲ್ಲಿ ಹೇಗೆಸ್ತ್ರೀಯರುದಿಟ್ಟತನದಿಂದಪುರುಷರಿಗೆ ಸಮಾನವಾಗಿಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಸಮಾನವಾಗಿ ನಿಂತರೋಅದೇರೀತಿ ಇಂದಿನ ಸ್ತ್ರೀ ಕೂಡ ಸಮಾನತೆಯನ್ನು ಸಾಧಿಸುವಲ್ಲಿ ಪ್ರಯತ್ನಿಸಬೇಕೆಂದರು.
ಶ್ರೀಮತಿ ಜಿ.ಎಂ.ಕೋಟಿಗೌಡರ ಇಂದಿನ ಸ್ತ್ರೀ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಶ್ರಮಪಟ್ಟು ಪ್ರಯತ್ನಿಸಿ ಸಾಧನೆಯತ್ತ ಸಾಗಬೇಕೆಂದರು.
ಕಾಲೇಜಿನಅನೇಕವಿದ್ಯಾರ್ಥಿನಿಯರುಇಂದಿನ ಸ್ತ್ರೀ ಕುರಿತು ವೈವಿಧ್ಯಮಯರೀತಿಯಲ್ಲಿತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಉತ್ತಮಅಭಿಪ್ರಾಯ ಮಂಡನೆಗಳಿಗೆ ಬಹುಮಾನ ಘೋಷಿಸುವ ಸಲುವಾಗಿ ಮಂಗಳಾ ಚಿಗಟೇರಿ, ರುದ್ರಾಕ್ಷಿ ಹಟ್ಟಿಹೊಳಿ ಮತ್ತು ಸೌಮ್ಯ ಡಿ. ಕೆಂಗಾನವರ ನಿರ್ಣಾಯಕರಾಗಿ ಪಾಲ್ಗೊಂಡಿದ್ದರು.
ಕಾಲೇಜಿನ ಪ್ರಾಚಾರ್ಯ ಅಶ್ವಿನಿ ಇಂಚಲ ಅಧ್ಯಕ್ಷತೆಯನ್ನು ವಹಿಸಿದ್ದರು. ಮಹಿಳಾ ಮಂಟಪದ ಸಂಚಾಲಕಿ ಡಾ .ಶೈಲಜಾ ಅಮರಶೆಟ್ಟಿ ಕಾರ್ಯಕ್ರಮದ ಉದ್ದೇಶಗಳನ್ನು ವಿವರಿಸುತ್ತಾ ಪ್ರಾಸ್ತಾವಿಕವಾಗಿ ನುಡಿಗಳನ್ನಾಡಿ ಸರ್ವರನ್ನು ಸ್ವಾಗತಿಸಿದರು.ಕಾಲೇಜಿನ ಪ್ರಾಧ್ಯಾಪಕಿ ವಂದನೆಗಳನ್ನು ಸಲ್ಲಿಸಿದರೆ ಜ್ಯೋತಿ ಭಾವಿಕಟ್ಟಿ ನಿರೂಪಿಸಿದರು. ಕಾಲೇಜಿನ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು.
ಕಾರ್ಯಕ್ರಮದಲ್ಲಿ ನಿರ್ಮಲಾಚಿಗಟೇರಿ, ಬೇವಿನಕಟ್ಟಿ, ಕಾಲೇಜಿನ ಪ್ರಾಧ್ಯಾಪಕ ವೃಂದದವರು ಮತ್ತುಇನ್ನಿತರರುಕಾರ್ಯಕ್ರ

# ಪರಿಸರ ಮಾಹಿತಿ ಕಾರ್ಯಕ್ರಮ



**ನವಲಗುಂದ :** ಇಂದಿನ ದಿನಗಳಲ್ಲಿ ಜೂನ್ 5ರಂದು ಮಾತ್ರ ಗಿಡ ನೆಡುವ ಮೂಲಕ “ಪರಿಸರ ಪ್ರೇಮಿ’ ಎನಿಸಿ ಅನಂತರ ಅದರ ಬಗ್ಗೆ ಯಾವುದೇ ರೀತಿಯ ಕಾಳಜಿ ವಹಿಸದೇ ಪರಿಸರದ ಕುರಿತಾದ ಭಾಷಣಗಳಿಗೆ ಸೀಮಿತವಾಗಿ ಬಿಟ್ಟಿದೆ. ಮತ್ತೆ ಪರಿಸರವು ನೆನಪಾಗಬೇಕೆಂದರೆ ಮುಂದಿನ ವರ್ಷದ ಜೂನ್ 5 ಬರಬೇಕು. ಇದು ಇಂದಿನ ಸ್ಥಿತಿಯಾಗಿದೆ ಎಂದು ಧರ್ಮಸ್ಥಳ ಸಂಸ್ಥೆಯ ಯೋಜನಾಧಿಕಾರಿ ದಿನೇಶ್ ಶೇರಿಗಾರ ಕಳವಳ ವ್ಯಕ್ತಪಡಿಸಿದರು.
ಅವರು ಪಟ್ಟಣದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ 8 ರಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಿದ್ಯಾರ್ಥಿಗಳಿಗೆ ಪರಿಸರ ಮಾಹಿತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಲೆಗಳಲ್ಲಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಶಾಲೆ ಮುಖ್ಯಶಿಕ್ಷಕ ಎನ್ ಎಸ್ ಉಪ್ಪಿನ ಅವರು ಶಾಲಾ ವಿದ್ಯಾರ್ಥಿಗಳಿಗೆ ಪರಿಸರ ಕುರಿತು ಪ್ರಬಂಧ, ಬಹುಮಾನ ವಿತರಿಸಿ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ ಕುರಿತು ಸುಧೀರ್ಘ ಮಾಹಿತಿ ನೀಡಿದರು.
ಸಂಸ್ಥೆಯ ಕೃಷಿ ಮೇಲ್ವಿಚಾರಕ ಶಂಕರ ಆರಗೋಳ ಮಾತನಾಡಿ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಪರಿಸರ ಸಂರಕ್ಷಣೆ ಕುರಿತು ಚಿಂತನೆ,ಜಾಗೃತಿ, ಅರಿವು ಮೂಡಿಸುವ ಸಲುವಾಗಿ ತಾಲೂಕಿನ 10 ಶಾಲಾ ಕಾಲೇಜುಗಳಲ್ಲಿ ಪರಿಸರದ ಕುರಿತು ಮಾಹಿತಿ ಕಾರ್ಯಕ್ರಮ ಮತ್ತು ಪರಿಸರದ ಕುರಿತು ಸ್ಪರ್ಧೆಗಳನ್ನು ಆಯೋಜನೆ ಮಾಡಿ ವಿದ್ಯಾರ್ಥಿಗಳನ್ನ ಪರಿಸರ ಸಂರಕ್ಷಣೆ ಮತ್ತು ಹೆಚ್ಚಿನ ಆಸಕ್ತಿ ಮೂಡುವಂತಾಗಲಿ ಎಂದು ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತಿದೆ ಎಂದರು,
ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಪ್ರಧಾನಪ್ಪ ಗುಂಡಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಹಾಮಂಡಳ ರಾಜ್ಯಾಧ್ಯಕ್ಷ ಅಬ್ದುಲರಝಾಕ ನದಾಫ, ಒಕ್ಕೂಟ ಅಧ್ಯಕ್ಷೆ ಸುಜಾತ ಜಾದವ, ಶಿಕ್ಷಕಿಯರಾದ ವಿ ಜಿ ಕುರಹಟ್ಟಿ, ಬಿ ಜಿ ಹೆಬ್ಬಳ್ಳಿ, ವಲಯ ಮೇಲ್ವಿಚಾರಕಿ ವಾಣಿಶ್ರೀ ಸೇರಿದಂತೆ ಸಂಘದ ಪದಾಧಿಕಾರಿಗಳು ಶಾಲಾ ಸಹಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸೇವಾ ಪ್ರತಿನಿಧಿ ಫಾತಿಮಾ ದೊಡ್ಡಮನಿ ಕಾರ್ಯಕ್ರಮ ನಿರ್ವಹಿಸಿದರು.

# ಹು.ಧಾ.ದಲ್ಲಿ ಪೊಲೀಸ್ ದಾಳಿ16 ಗಾಂಜಾ ಮಾರಾಟಗಾರರ ಬಂಧನ-ಮಾರಕಾಸ್ತ್ರ ವಶ



**ಹುಬ್ಬಳ್ಳಿ :** ಹುಬ್ಬಳ್ಳಿ-ಧಾರವಾಡ ಮಹಾನಗರ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ಮಾದಕ ವಸ್ತುಗಳ ಮಾರಾಟ ಜಾಲ ಎಷ್ಟೊಂದು ಬಲಿಷ್ಠವಾಗಿ ಬೆಳೆದುನಿಂತಿದೆ ಎಂಬುದು ತೀರ ಇತ್ತೀಚೆಗೆ ಪೊಲೀಸ್ ಇಲಾಖೆಯ ಬಿಸಿ ಮುಟ್ಟುವವರೆಗೂ ನಿರಾತಂಕವಾಗಿಯೇ ವಿಜೃಂಭಿಸಿದ್ದು, ಅದು ಇದೀಗ ಬೆಳಕಿಗೆ ಬರುತ್ತಿದೆ. ಹುಬ್ಬಳ್ಳಿ ಹಾಗೂ ಧಾರವಾಡಗಳಲ್ಲಿ ಮತ್ತೆ ದಾಳಿ ನಡೆಸಿದ ಪೊಲೀಸರು 16 ಜನ ಗಾಂಜಾ ಮಾರಾಟಗಾರರನ್ನು ಬಂಧಿಸಿ ಅವರಿಂದ ಮಾದಕ ವಸ್ತು ಸೇರಿ ಕಾರು ನಗದು ಹಾಗೂ ಮಾರಕಾಸ್ತ್ರಗಳನ್ನುವಶಪಸಿಕೊಂಡಿದ್ದಾರೆ.ಹು-ಧಾ ಪೊಲೀಸ್ ಆಯುಕ್ತರಾದ ಎನ್. ಶಶಿಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.
ಹುಬ್ಬಳ್ಳಿಯ ಬೆಂಡಿಗೇರಿ ಠಾಣೆ ವ್ಯಾಪ್ತಿಯ ಕೆ.ಇ.ಬಿ ಗ್ರಿಡ್ ಬಳಿ ನಡೆಸಿದ ದಾಳಿಯಲ್ಲಿ ಓಡಿಸ್ಸಾದ ನೀಲಾಂಬರ ರಾವುತ್, ಕೇಶಬಚಂದ್ರ, ಹಾವೇರಿಯ ತೌಸೀಫ್ ಅಹ್ಮದ್, ಹಳೇಹುಬ್ಬಳ್ಳಿಯ ಪವನ, ಸಿದ್ದಾರ್ಥ, ಮಂಜುನಾಥ, ನದೀಂ, ವಿಠ್ಠಲ, ಶಾನವಾಜ, ಕಮರೀಪೇಟೆಯ ಗಣಪತಸಾ, ಉತ್ತರಾಖಂಡನಮಹ್ಮದಅಲಿ,ಹಳೇಹುಬ್ಬಳ್ಳಿಚನ್ನಪೇಟೆಯ ಕಾರ್ತಿಕ ಸೇರಿ ಒಟ್ಟು 12 ಜನರನ್ನು ಬಂಧಿಸಿ ಅವರಿಂದ ಎರಡೂವರೆಲಕ್ಷರೂ.ಮೌಲ್ಯದ2.5ಕೆ.ಜಿ.ಗಾಂಜಾ,ಐದುಲಕ್ಷ ರೂ.ಮೌಲ್ಯದಸ್ವಿಫ್ಟ್‌ಕಾರು,ಎರಡುತಲವಾರ,ಡ್ರ್ಯಾಗರ್,10 ಮೊಬೈಲ್‌ಗಳು,ನಗದುವಶಪಡಿಸಿಕೊಡಿದ್ದಾರೆ.ಈದಾಳಿಯ ಸಂದರ್ಭದಲ್ಲಿ ಕೆಲ ಆರೋಪಿಗಳು ಪರಾರಿಯಾಗಲು ನಡೆಸಿದ ದಾಳಿಯಲ್ಲಿ ಇಬ್ಬರು ಪೊಲೀಸ್ ಸಿಬ್ಬಂದಿ ಗಾಯಗ-ೊಂಡಿದ್ದಾರೆ.ಧಾರವಾಡದ ಕೋಳಿಕೇರಿ ನುಚ್ಚಂಬ್ಲಿಬಾವಿ ಬಳಿ ಗಾಂಜಾಮಾರಾಟದಸುಳಿವಿನಮೇರೆಗೆನಡೆಸಿದದಾಳಿಯಲ್ಲಿ ಸೊಲ್ಲಾಪುರದ ಸೈಫಲಿ ಸುತಾರ, ಸಂಕೇಶ್ವರ ಹತ್ತಿರದ ಸೊಲ್ಲಾಪುರದ ಸಂಕೇತ್ ಕೋತ್, ಧಾರವಾಡದ ಸಂದೀಪ್ ಸಳಕೆ, ಹಜರತಲಿ ಮಕಾನದಾರ ಎಂಬುವವರನ್ನು ಬಂದಿಸಿ 1942 ಗ್ರಾಂ ಗಾಂಜಾ, 2 ಸ್ಮಾರ್ಟ್ ಫೋನ್, ನಗದು ಇತ್ಯಾದಿ ವಶಪಡಿಸಿಕೊಳ್ಳಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.
ಈ ಸಂದರ್ಭದಲ್ಲಿ ಡಿಸಿಪಿಗಳಾದ ಮಹಾನಿಂಗ ನಂದಗಾವಿ, ರವೀಶ್ ಸಿ.ಆರ್. ಹಾಗೂ ಪೊಲೀಸ್ ಸಿಬ್ಬಂದಿಯವರು ಉಪಸ್ಥಿತರಿದ್ದರು. ಹು-ಧಾ ಮಹಾನಗರದಲ್ಲಿ ಮಾದಕ ವಸ್ತುಗಳ ಜಾಲ ಪತ್ತೆ ಹಾಗೂ ತಡೆಗೆ ನೂತನ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ತೆಗೆದುಕೊಳ್ಳುತ್ತಿರುವ ಕ್ರಮದ ಬಗ್ಗೆ ಜನತೆಯಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ.

# ಜಮೀನಿಗಿಳಿದ ಬಸ್: ಪ್ರಯಾಣಿಕರು ಪಾರು


**ನವಲಗುಂದ :** ನವಲಗುಂದದಿಂದ ಕುಂದಗೋಳಕ್ಕೆ ತರಳುತ್ತಿದ್ದ ಸಾರಿಗೆ ಸಂಸ್ಥೆ ಬಸ್ ರಸ್ತೆ ಪಕ್ಕದ ಜಮೀನಿಗಿಳಿದ ಘಟನೆ ತಾಲೂಕಿನ ಚೀಲಖವಾಡ ಗ್ರಾಮದ ಹತ್ತಿರ ಶುಕ್ರವಾರ ನಡೆದಿದ್ದು, ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.
ಚಿಲಕವಾಡ ಗ್ರಾಮದ ಹತ್ತಿರ ರಸ್ತೆಯಲ್ಲಿ ರೈತರು ವಿವಿಧ ಬೆಳೆಕಾಳುಗಳ ರಾಶಿಗಳನ್ನು ರಸ್ತೆಯ ಮೇಲೆ ಹಾಕಿದ್ದರಿಂದ ಪಕ್ಕದಲ್ಲಿ ಮೆಲ್ಲಗೆ ಸಂಚರಿಸುವಾಗ ಬಸ್ ಜಮೀನಿಗಿಳಿದಿದೆ.
ಅದೃಷ್ಟವಶಾತ್ ಬಸ್‌ನಲ್ಲಿದ್ದ ಯಾವುದೇ ಪ್ರಯಾಣಿಕರಿಗೆ ಗಾಯಗಳಾಗಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.



ರಸ್ತೆಯ ಮೇಲೆ ಹಾಕಿರುವ ರಾಶಿಗಳನ್ನು ತೆಗೆಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಭಾಗದ ಪ್ರಯಾಣಿಕರು ಒತ್ತಾಯಿಸಿದ್ದಾರೆ.

# ಚಾಮುಂಡಿ ಬೆಟ್ಟಕ್ಕೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಭೇಟಿ: ನಾಡಿನ ಸುಭಿಕ್ಷೆಗೆ ಪ್ರಾರ್ಥನೆ ಸಲ್ಲಿಸಿದ ಸಚಿವರು





**ಮೈಸೂರು :** ಶ್ರಾವಣ ಮಾಸದ ಮೊದಲ ಶುಭ ಶುಕ್ರವಾರದಂದು ಪುರಾಣ ಪ್ರಸಿದ್ಧ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ತೆರಳಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿಯ ದರ್ಶನ ಪಡೆದರು.
ನಾಡಿನ ಸರ್ವ ಜನರ ಹಿತ ಕಾಯುವಂತೆ ಶಕ್ತಿದಾತೆ ತಾಯಿ ಚಾಮುಂಡೇಶ್ವರಿಯಲ್ಲಿ ಸಚಿವರು ಪ್ರಾರ್ಥಿಸಿದರು.
ನಂತರ ಚಾಮುಂಡಿ ಬೆಟ್ಟದಲ್ಲಿ ಸಚಿವರು, ತಮ್ಮ ಇಲಾಖೆಯ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳ ಜೊತೆ ಅನೌಪಚಾರಿಕ ಚರ್ಚೆ ನಡೆಸಿ, ಮೈಸೂರು ಜಿಲ್ಲೆಯಲ್ಲಿ ಇಲಾಖೆಯ ಜನಪರ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆ ಸೂಚಿಸಿದರು.
ಈ ವೇಳೆ ಇಲಾಖೆಯ ಜಿಲ್ಲಾ ಉಪ ನಿರ್ದೇಶಕ ಡಿ ಮಂಜುನಾಥ್ ಮತ್ತಿತರ ಅಧಿಕಾರಿಗಳು ಹಾಜರಿದ್ದರು.

**ಕಾಂಗ್ರೆಸ್ ಜನಾಂದೋಲನದಲ್ಲಿ ಭಾಗಿ:**
ಇದಕ್ಕೂ ಮುನ್ನ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು, ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕೆಪಿಸಿಸಿ ವತಿಯಿಂದ ಆಯೋಜಿಸಿದ್ದ ಕೇಂದ್ರದ ಎನ್ ಡಿ ಎ ಸರ್ಕಾರದಿಂದ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯ ಹಾಗೂ ಭ್ರಷ್ಟ ಬಿಜೆಪಿ-ಜೆಡಿಎಸ್ ಪಾಪದ ಪಾದಯಾತ್ರೆಯ ವಿರುದ್ಧದ "ಸತ್ಯಮೇವ ಜಯತೆ" ಕಾಂಗ್ರೆಸ್ ಬೃಹತ್ ಜನಾಂದೋಲನದಲ್ಲಿ ಭಾಗವಹಿಸಿದರು.
ಜನಾಂದೋಲನದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ, ಕೆಪಿಸಿಸಿ ಅಧ್ಯಕ್ಷರು ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಡಾ. ಜಿ.ಪರಮೇಶ್ವರ್, ಎಚ್. ಕೆ. ಪಾಟೀಲ್ ಸೇರಿದಂತೆ ಸಂಪುಟದ ಎಲ್ಲ ಸಚಿವರು, ಪಕ್ಷದ ಎಲ್ಲ ಶಾಸಕರು, ಎಲ್ಲ ಸಂಸದರು, ಪಕ್ಷದ ಮುಖಂಡರು, ಲಕ್ಷಾಂತರ ಕಾರ್ಯಕರ್ತರು ಭಾಗವಹಿಸಿದ್ದರು.

# ಪ್ರವಾಸಿ ಮಾರ್ಗದರ್ಶಿಗಳಿಂದ ಅರ್ಜಿ ಆಹ್ವಾನ

**ಬೆಳಗಾವಿ:** ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಹಾಗೂ ಪ್ರಚಾರ ಪಡೆಸುವ ಉದ್ದೇಶದಿಂದ ಬೆಳಗಾವಿ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳ ಐತಿಹಾಸಿಕ,ಧಾರ್ಮಿಕ, ಸಾಹಿತಿಕ, ಸಾಂಸ್ಕೃತಿಕ ಹಾಗೂ ಕಲಾ ವೈವಿಧ್ಯತೆಗಳನ್ನು ಒಳಗೊಂಡ ಸೃಜನಶೀಲತೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ದೇಶ-ವಿದೇಶಿ ಪ್ರವಾಸಿಗರಿಗೆ ಮಾಹಿತಿ ನೀಡಲು ಪ್ರವಾಸಿ ಮಾರ್ಗದರ್ಶಿಗಳ ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಹತೆ: ಅಭ್ಯರ್ಥಿಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿದ್ದು, ಕಡ್ಡಾಯವಾಗಿ ದ್ವಿತಿಯ ಪಿ.ಯು.ಸಿ ತೇರ್ಗಡೆ ಅಥವಾ ಅದರ ಸಮನಾಗಿ ತರಬೇತಿಯಾಗಿರಬೇಕು. ಅರ್ಜಿದಾರರುತಮ್ಮ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಇಲ್ಲದೇ ಇರುವ ಬಗ್ಗೆ ಪೋಲಿಸ್ ಇಲಾಖೆಯಿಂದ ಪೋಲಿಸ್ ನಿರಾಪೇಕ್ಷಣಾ ಮೂಲ ದೃಢೀಕರಣ ಪತ್ರ ಪಡೆದು ಲಗತ್ತಿಸುವುದು. ಅರ್ಜಿದಾರರು ಕಡ್ಡಾಯವಾಗಿ ಬೆಳಗಾವಿ ಜಿಲ್ಲೆಯವರಾಗಿರಬೇಕು. ಅರ್ಜಿದಾರರ ವಯಸ್ಸು 21 ರಿಂದ 45 ವರ್ಷಗಳ (ಪರಿಶಿಷ್ಟ ಜಾತಿ ಮತ್ತುಪರಿಶಿಷ್ಟ ಪಂಗಡವರ್ಗದ ಅಭ್ಯರ್ಥಿಗಳ ವಯೋಮಿತಿ 21 ರಿಂದ 48 ವರ್ಷ) ವಯೋಮಿತಿಯಲ್ಲಿರಬೇಕು.
ಪ್ರವಾಸೋದ್ಯಮ ಇಲಾಖೆಯು ಗುರುತಿಸಿರುವ ಬೆಳಗಾವಿ ಜಿಲ್ಲೆಯ ಪ್ರವಾಸಿ ತಾಣಗಳಾದ ಸೊಗಲ, ಕಿತ್ತೂರು, ದೇಗಾವ್, ಸವದತ್ತಿಯಲ್ಲಮ್ಮ, ಮಲಪ್ರಭಡ್ಯಾಂ, ಹಲಸಿ, ಶಬರಿವ್ಯಾಲಿ, ಘಟಪ್ರಭ, ರಾಜಹಂಸಗಡ, ನವಿಲುತೀರ್ಥ, ಗೊಡಚಿನಮಲ್ಕಿ ಫಾಲ್ಸ್ ಧೂಪದಾಳ ಮತ್ತು ನಿಡಸೋಸಿ ಸ್ಥಳೀಯ ಅಭ್ಯರ್ಥಿಗಳಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುವುದು.
ಆಸಕ್ತರು ಸೆಪ್ಟಂಬರ್ 20 ರ ಸಂಜೆ 5.30 ರೊಳಗಾಗಿ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ.
ಹೆಚ್ಚಿನ ಮಾಹಿತಿಗಾಗಿ ಕಚೇ-ರಿಯ ವೆಬ್‌ಸೈಟ್ dd-tourismb@gmail.com ಅಥವಾ ಕಚೇರಿಯ ದೂರವಾಣಿ:0831-2470879 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು

## ವೃದ್ಧಾಶ್ರಮದಲ್ಲಿ ಬಸವಪಂಚಮಿ

# ಕಲ್ಲನಾಗರಕ್ಕೆ , ಹಾವಿನ ಹುತ್ತಕ್ಕೆ, ಹಾಲನೆರೆದು ವ್ಯರ್ಥ ಮಾಡಬೇಡಿ: ಶ್ರೀ ಸಿದ್ಧಬಸವ ದೇವರು






**ಬೆಳಗಾವಿ :** ಬಸವ ಪಂಚಮಿ ಯಂದು ಕಲ್ಲನಾಗರಕ್ಕೆ , ಹಾವಿನ ಹುತ್ತಕ್ಕೆ, ಹಾಲನೆರೆದು ವ್ಯರ್ಥ ಮಾಡಬೇಡಿ, ಅನಾಥ ಮಕ್ಕಳಿಗೆ, ರೋಗಿಗಳಿಗೆ ಹಾಲು ಕೊಟ್ಟು ಮಾನವತೆ ಮೆರೆಯಿರಿ. ಭಾರತೀಯರು ಆಚರಿಸುವ ಎಲ್ಲಾ ಹಬ್ಬಗಳು ಜನಪದ ಸಂಸ್ಕೃತಿ ಮತ್ತು ಜೀವನ ಮೌಲ್ಯಗಳನ್ನು ತಿಳಿಸುವ ವೈಚಾರಿಕ ಪ್ರಜ್ಞೆಯಿಂದ ಕೂಡಿದೆ ಎಂದು ಯಮಕನಮರಡಿ ಹುಣಸಿಕೊಳ ಮಠದ ಶ್ರೀ ಸಿದ್ಧಬಸವ ದೇವರು ಮಾತನಾಡಿದರು.
ನಗರದ ದೇವರಾಜ ಅರಸ ಕಾಲನಿಯಲ್ಲಿರುವ ನಾಗನೂರು ಶ್ರೀ ಶಿವಬಸವೇಶ್ವರ ಟ್ರಸ್ಟಿನ್ ವೃದ್ಧಾಶ್ರಮದಲ್ಲಿ ಶುಕ್ರವಾರ ಮಾನವ ಬಂಧುತ್ವ ವೇದಿಕೆ ಹಾಗೂ ಬಸವಪರ & ಪ್ರಗತಿಪರ ಸಂಘಟನೆಗಳ ಒಕ್ಕೂಟ, ರಾಷ್ಟ್ರೀಯ ಬಸವದಳ ಮತ್ತು ಬಸವ ಕಾಯಕ ಜೀವಿಗಳ ಸಂಘ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ "ಬಸವ ಪಂಚಮಿ" ಕರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.
ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಯುವ ನಾಯಕ ರಾಹುಲ್ ಜಾರಕಿಹೊಳಿ ಮಾತನಾಡಿ ಪುರೋಹಿತ ಶಾಹಿಗಳು ರ್ಥವಿಲ್ಲದ ಆಚರಣೆ ಸೃಷ್ಟಿಸಿ ಪುರಾಣ ಕಥೆಗಳ ಮೂಲಕ ವೈಭವಿಕರಿಸಿ ಜನರಲ್ಲಿ ಭಯ ಮೂಡಿಸಿ ಮೌಢ್ಯವನ್ನು ಹೆಚ್ಚಿಸುವ ನಿರಂತರ ಪ್ರಯತ್ರ ಇಂದಿನವರೆಗೆ ಮುಂದುವರೆದಿದೆ. ಶೇ 80ರಷ್ಟು ಭಾರತೀಯ ಸಮಾಜ ಇಂದಿನ ವಿಜ್ಞಾನ ಯುಗದಲ್ಲಿ ಮೂಢನಂಬಿಕೆ, ಅಂಧಶ್ರದ್ಧೆಯ ಸಮೂಹ ಸನ್ನಿಗೆ ಒಳಗಾಗಿ ಧ್ವನಿ ಕಳೆದುಕೊಂಡಿದ್ದು ಸಮಾಜದ ದುರಂತ. ಈ ಹಿನ್ನೆಲೆಯಲ್ಲಿ ನಾಗಪಂಚಮಿ ದಿನ ಕಲ್ಲುನಾಗರಕ್ಕೆ ಮತ್ತು ಹುತ್ತಕ್ಕೆ ಹಾಲನ್ನೆರೆಯುವುದು ಎಷ್ಟು ಸಮಂಜಷ ಎನ್ನುವ ಯೋಚನೆ ಮಾಡಬೇಕಿದೆ ಎಂದರು
ವೃದ್ಧಾಶ್ರಮದ ಹಿರಿಯುರಿಗೆ ಕುಡಿಯಲು ಬಾದಾಮಿ ಹಾಲು ನೀಡಿ, ಬಸವ ಪಂಚಮಿ ಹಬ್ಬವನ್ನು ಆಚರಿಸಿದರು.
ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೈಜಯಂತಿ ಚೌಗಲಾ. ಮಾನವ ಬಂಧುತ್ವ ವೇದಿಕೆ ವಿಭಾಗೀಯ ಸಂಚಾಲಕ ತೋಳಿ ಭರಮಣ್ಣ ಶಂಕರ ಗುಡಸ, , ಸಂತೋಷ ಗುಡದ್,
ಪ್ರಶಾಂತ ಪೂಜಾರಿ, ಪ್ರಕಾಶ ಬೋಮ್ಮನ್ನವರ, ಅಂಕುಶ ಪಾಟೀಲ, ಸಂತೋಷ ಪಾಟೀಲ್ , ರಾಷ್ಟ್ರೀಯ ಬಸವದಳ ಮತ್ತು ಬಸವ ಕಾಯಕ ಜೀವಿಗಳ ಸಂಘ ಪದಾದಿಕಾರಿಗಳು ಹಾಜರಿದ್ದರು.

# ವಿವಿಧ ಸಾಲ ಸೌಲಭ್ಯ ಯೋಜನೆಗಳಿಗೆ ಅರ್ಜಿ ಆಹ್ವಾನ

**ಬೆಳಗಾವಿ :** ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ಪ್ರಸಕ್ತ ಸಾಲಿನ ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು, ಸ್ವಯಂ ಉದ್ಯೋಗ ನೇರಸಾಲ ಯೋಜನೆ,
ಅರಿವು-ಶೈಕ್ಷಣಿಕ ನೇರಸಾಲ ಯೋಜನೆ, ಗಂಗಾ ಕಲ್ಯಾಣ ಯೋಜನೆ ಈ ಯೋಜನೆಯಲ್ಲಿ ಕನಿಷ್ಠ 2 ಎಕರೆ ಹೊಂದಿರಬೇಕು, ಸ್ವಯಂ ಉದ್ಯೋಗ ನೇರಸಾಲ (ಬ್ಯಾಂಕ್‌ಗಳ ಸಹಯೋಗದೊಂದಿಗೆ), ಸ್ವಾವಲಂಬಿ ಸಾರಥಿ ಯೋಜನೆ, ವಿದೇಶಿ ವ್ಯಾಸಂಗ ಯೋಜನೆ, ಸ್ವಾತಂತ್ರ್ಯ ಅಮೃತ ಮುನ್ನಡೆ ಯೋಜನೆಗಳ ಸಹಾಯಧನ ಸಾಲ ಸೌಲಭ್ಯಗಳನ್ನು ನೀಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಹತೆಗಳು:
ರಾಜ್ಯದ ಖಾಯಂ ನಿವಾಸಿಯಾಗಿರಬೇಕು, ಸರ್ಕಾರದ ಆದೇಶ ಸಂಖ್ಯೆ ಸಕಇ 225/ಬಿಸಿಎ/2000 ದಿನಾಂಕ 30-03-2002 ರನ್ವಯ ವಿಶ್ವಕರ್ಮ ಸಮುದಾಯ ಹಾಗು ಅದರ ಉಪ ಜಾತಿಗಳಿಗೆ ಸೇರಿರಬೇಕು. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ, ವಯೋಮಿತಿ 18 ವರ್ಷಗಳಿಂದ 55 ವರ್ಷಗಳ ಮಿತಿಯಲ್ಲಿರಬೇಕು, ನಿಗಮದ/ಸರ್ಕಾರದ ಯಾವುದಾದರೂ ಯೋಜನೆಗಳಡಿ ಈ ಹಿಂದೆ ಸೌಲಭ್ಯ ಪಡೆದಿರಬಾರದು, ಕುಟುಂಬದ ಒಬ್ಬರಿಗರ ಮಾತ್ರ ಸೌಲಭ್ಯ ಒದಗಿಸಲಾಗುವುದು.
ಆಸಕ್ತರು ಆ.31 ರೊಳಗಾಗಿ ಅರ್ಜಿಗಳನ್ನು ಸೇವಾ ಸಿಂಧು ಮೂಲಕ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ನಿಗಮದ https://kvcdcl.karnataka.gov.in ವೆಬ್‌ಸೈಟ್ ಅಥವಾ ಕಛೇರಿಯ ದೂರವಾಣಿ : 080-22374848/2402163, 7899899039 ಸಂ-ಖ್ಯೆಗೆ ಅಥವಾ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಜಿಲ್ಲಾ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ (ನಿ) ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳಿಗೆ ಚಪ್ಪಲಿ ಭಾಗ್ಯ



**ರಬಕವಿ-ಬನಹಟ್ಟಿ :** ಸರ್ಕಾರದ ಯೋಜನೆಗಳು ನಾನಾ ಸ್ವರೂಪ ಪಡೆದುಕೊಳ್ಳುತ್ತಿದ್ದು, ಮಕ್ಕಳಿಗೆ ಬೇಡಿಕೆಗೆ ಅನುಸಾರವಾಗಿ ಶೂ ಬದಲು ಚಪ್ಪಲಿ ನೀಡಲಾಗಿದೆ. ಸರ್ಕಾರದ ದ್ವಂದ್ವ ನಿಲುವಿನ ಆದೇಶದಿಂದ ಮಕ್ಕಳು ಹಾಗೂ ಪಾಲಕರಿಗೆ ಬೇಸರ ಮೂಡಿಸಿತ್ತು. ಇದಕ್ಕೆ ತೆರೆ ಎಳೆದು ಆಯಾ ಶಾಲಾ ಬೇಡಿಕೆಗಣುಸಾರ ವ್ಯವಸ್ಥೆ ಕಲ್ಪಿಸಿರುವದು ಸ್ವಾಗತಾರ್ಹ.

ಬನಹಟ್ಟಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ನೂರಾರು ಚಪ್ಪಲಿ ವಿತರಿಸಿ ಮಾತನಾಡಿದ ಶಾಸಕ ಸಿದ್ದು ಸವದಿ, ಶೂ ಬದಲಾಗಿ ಚಪ್ಪಲಿ ವಿತರಣೆ ಬಗ್ಗೆ ಸರ್ಕಾರದ ಗಮನ ಸೆಳೆದು ಮಕ್ಕಳ ಹಾಗು ಪಾಲಕರ ಆಶಯದಂತೆ ಶೂ ವಿತರಣೆಯಲ್ಲಿ ಸರ್ಕಾರ ಬದ್ಧವಾಗಿದೆ ಎಂದರು.

ಗೋವಿಂದ ಡಾಗಾ, ಉಪಪ್ರಾಚಾರ್ಯ ಎಂ.ಎಂ. ನಾಯಕವಾಡಿ, ಎಸ್.ಬಿ. ಫಡಾಲೋಟಿ, ಬಿ.ಜಿ. ಬಂಗೇರ, ಎಂ.ಸಿ. ಮಹಾಬಳಶೆಟ್ಟಿ, ಭುವನೇಶ್ವರಿ ಖವಾಸಿ, ರವಿ ಬಸಗೊಂಡನವರ ಸೇರಿದಂತೆ ಅನೇಕರಿದ್ದರು.

# ತಪ್ಪು ಮುಚ್ಚಿಕೊಳ್ಳಲು ಜಾತಿ ಮುಂದೆ ತರಬೇಡಿ: ಹದ್ಲಿ

**ಬಾಗಲಕೋಟೆ :** ಶಾಸಕ ಎಚ್. ವೈ.ಮೇಟಿ ಜಾತಿ ರಾಜಕಾರಣ ಮಾಡಿಲ್ಲ. ತಾವು 1 ತಪ್ಪು ಮುಚ್ಚಿಕೊಳ್ಳಲು ಜಾತಿಯನ್ನು ಮುನ್ನೆಲೆಗೆ ತರಬೇಡಿ ಎಂದು ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ನಾಗರಾಜ ಹದ್ಲಿ ಹೇಳಿದರು.

ಇಂದು ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಈ ಹಿಂದೆ ಬಿವಿವಿ ಸಂಘಕ್ಕೆ ಜೆ.ಎಚ್. ಪಟೇಲ ಸಿಎಂ ಇದ್ದಾಗ ನೂರಾರು ಎಕರೇ ಭೂಮಿ ನೀಡಿದ್ದರು.

ಅಂದು ಕೂಡಾ ಎಚ್.ವೈ. ಮೇಟಿ ಶಾಸಕ, ಮಂತ್ರಿ ಇದ್ದರು. ವಿರೋಧ ಮಾಡಲಿಲ್ಲ. ಇಂದು ವಿರೋಧ ಮಾಡಿಲ್ಲ. ಕಾನೂನು ಬಾಹಿರ ಭೂಮಿ ಪಡೆದು ಬೇರೊಬ್ಬರ ಮೇಲೆ ಹಾಕುವುದು ಸರಿಯಲ್ಲ. ಬಿವಿವಿ ಸಂಘದ ಬಗ್ಗೆ ನಮಗೂ ಹೆಮ್ಮೆ ಇದೆ. ಸಂಘದ ಹೆಸರು ದುರ್ಬಳಕೆ ಮಾಡಿಕೊಂಡು ಸಂತ್ರಸ್ತರಿಗೆ ಮೀಸಲಿಟ್ಟ ಜಾಗೇ ಅನ್ಯಾಯವಾಗಿ ವಂಚನೆ ಮಾಡಿರುವುದನ್ನು ಒಪ್ಪಿಕೊಳ್ಳಬೇಕು ಎಂದರೇ ಹೇಗೆ ಅಂತ ಪ್ರಶ್ನಿಸಿದರು.

ನವನಗರ ಯೂನಿಟ್-1 ಸಂಪೂರ್ಣ ಅಭಿವೃದ್ಧಿ ಪಡಿಸಿ ನಗರಸಭೆಗೆ ಹಸ್ತಾಂತರ ಮಾಡಲು 2013 ರಿಂದ 2018 ವರೆಗೆ ಎಚ್.ವೈ.ಮೇಟಿ ಶಾಸಕರು ಇದ್ದಾಗ 135 ಕೋಟಿ ರೂ. ಅನುದಾನ ತಂದಿದ್ದರು. ತಾಂತ್ರಿಕ ಕಾರಣದಿಂದ ಹಸ್ತಾಂತರ ಆಗಲಿಲ್ಲ.

ಮುಂದೆ ಬಡ್ಡಿ ಸಮೇತ 155 ಕೋಟಿ ರೂ. ಆಗಿತ್ತು. ಇದರಲ್ಲಿ ಬೇಕಾಬಿಟ್ಟಿಯಾಗಿ ಕಾಮಗಾರಿ ಮಾಡಿದ್ದಾರೆ. ಅನಗತ್ಯವಾಗಿ ಪುಟ್‌ಪುತ್ ಮಾಡಿದರು. ತಮ್ಮ ಸಂಘ, ಸಂಸ್ಥೆ ಅಕ್ಕಪಕ್ಕ ಹಾಗೂ ತಾವು ಓಡಾಡುವ ರಸ್ತೆ ಸುಧಾರಣೆ ಮಾಡಿದರು. ಸರ್ಕಾರದ ಹಣದಲ್ಲಿ ತಮ್ಮ ಸಂಸ್ಥೆಯ ಕಟ್ಟಡ ಸಂರಕ್ಷಿಸಿಕೊಂಡರು. ವಾಂಬೆ ಕಾಲೋನಿ, ರಾಜೀವ ಗಾಂಧಿ ಕಾಲೋನಿಯಲ್ಲಿ ಒಂದೇ ಒಂದು ರಸ್ತೆ ,ಚರಂಡಿ ಮಾಡಲಿಲ್ಲ. ತಮ್ಮ ಮನಬದ್ದಂತೆ ಆಡಳಿತ ನಡೆಸಿದ್ದಾರೆ. ಸರ್ಕಾರದ ಕೋಟ್ಯಂತರ ಅನುದಾನ ಬೇಕಾಬಿಟ್ಟಿಯಾಗಿ ಖರ್ಚು ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಫಸ್ ಫಂಡ್ ವಿಚಾರದಲ್ಲಿಯೂ ತಮ್ಮದೇ ಸರ್ಕಾರ ಮಾಡಿದ ತಪ್ಪು. ನವನಗರ ನಿರ್ವಹಣೆಗಾಗಿ 387 ಕೋಟಿ ರೂ. ಕಾರ್ಫಸ್ ಫಂಡ ಮೀಸಲಿರಸಲಾಗಿತ್ತು. ತಮ್ಮ ಸರ್ಕಾರದ ಅವಧಿಯಲ್ಲಿ ಸಂಚಿವ ಸಂಪುಟ ದಲ್ಲಿ ಒಪ್ಪಿಗೆ ಪಡೆದು ಕೆಬಿಜೆಎನ್‌ಎಲ್ ಮೂಲಕ ಹಣ ಪಡೆದಿದ್ದು ಸರ್ಕಾರದ ದಾಖಲಾತಿಗಳಲ್ಲಿ ಸ್ಪಷ್ಟವಾಗಿದೆ. ಈಗ ನಮ್ಮ ಶಾಸಕರ ಮೇಲೆ ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದು ದೂರಿದರು.

# ಪಿ.ಎಸ್.ಐ ಪರಶುರಾಮ ಚಲವಾದಿ ಸಾವಿನ ತನಿಖೆ ಸಿಬಿಐಗೆ ವಹಿಸಬೇಕು: ಡಾ.ಆರ್. ಮೋಹನ್ ರಾಜ್

**ಕೊಪ್ಪಳ :** ಯಾದಗಿರಿ ಜಿಲ್ಲೆಯ ಪೊಲೀಸ್ ಸಬ್ ಇನ್ಸ್ಪೆಕ್ಟರ್ ಶ್ರೀ ದಿವಂಗತ ಪರಶುರಾಮ ಚಲವಾದಿ ಸೋಮನಾಳ ಇವರ ನಿಗೂಢ ದಾರುಣ ಸಾವನ್ನು ಖಂಡಿಸಿ ಸಿಬಿಐ ತನಿಖೆಗೆ ಆದೇಶಿಸ ಬೇಕು ಮತ್ತು ಪರಶುರಾಮ್ ರವರ ಪತ್ನಿ (ಮಡದಿ )ಗೆ ಸರ್ಕಾರಿ ನೌಕರಿ ಹಾಗೂ 50 ಲಕ್ಷ ರೂಗಳ ಪರಿಹಾರ ನೀಡಬೇಕು ಮತ್ತು ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ಆಗಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ಸಂಘಟನೆಯ ಹಾಗೂ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಕರ್ನಾಟಕ – ರಾಜ್ಯ ಸಂಚಾಲಕರಾದ ಡಾಕ್ಟರ್ ಆರ್ ಮೋಹನ್ ರಾಜ್ ರವರು ಹೇಳಿದರು.

ದಿವಂಗತ ಪರಶುರಾಮ ಚಲವಾದಿ ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕಿನ ಸೋಮನಾಳ ಗ್ರಾಮದವರಾಗಿದ್ದು ಇವರ ನಿಗೂಢ ಸಾವನ್ನು ನಮ್ಮ ಸಂಘಟನೆ ಉಗ್ರವಾಗಿ ಖಂಡಿಸುತ್ತದೆ .ಇವರ ಈ ಸಾವನ್ನು ಸಿಬಿಐ ತನಿಖೆಗೆ ಆದೇಶಿಸಬೇಕು ಹಾಗೂ ಕರ್ನಾಟಕದಲ್ಲಿ ದಲಿತರಿಗೆ ಆಗುತ್ತಿರುವ ಅನ್ಯಾಯ ದೌರ್ಜನ್ಯ, ದಬ್ಬಾಳಿಕೆ , ಮೋಸ, ವಂಚನೆ ನಿಲ್ಲಬೇಕು. ಇಂಥ ನಿಷ್ಠಾವಂತ ಪೊಲೀಸ್ ಅಧಿಕಾರಿಗೆ ನ್ಯಾಯ ಒದಗಿಸಬೇಕು ಮತ್ತು ಅವರ ಕುಟುಂಬಕ್ಕೆ ನ್ಯಾಯಯುತವಾದ ನ್ಯಾಯವನ್ನು ಒದಗಿಸಬೇಕು . ಪರಶುರಾಮ್ ಚಲವಾದಿ ಅವರು ದಿಟ್ಟ ಪ್ರಮಾಣಿಕ ನಿಷ್ಠಾವಂತ ಪೊಲೀಸ್ ಅಧಿಕಾರಿಯಾಗಿದ್ದು , ತಮ್ಮ



ಚಿಕ್ಕ ವಯಸ್ಸಿನಲ್ಲಿ ಕಿತ್ತು ತಿನ್ನುವಂತ ಬಡತನ ಇದ್ದರೂ ಸಹ ಛಲ ಬಿಡದೆ ಸುಮಾರು ಐದ ರಿಂದ ಆರು ಸರ್ಕಾರಿ ಹುದ್ದೆಗಳಲ್ಲಿ ನೇಮಕಗೊಂಡರು ಅವರು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಲು ಇಷ್ಟಪಟ್ಟು ಆಯ್ಕೆ ಮಾಡಿಕೊಂಡು ಇಲಾಖೆಗೆ ಬಂದಿರುತ್ತಾರೆ.

ಆದರೆ ಈ ಭ್ರಷ್ಟ ರಾಜಕಾರಣಿಗಳಾದ ಯಾದಗಿರಿ ಜಿಲ್ಲೆಯ ವಿಧಾನಸಭಾ ಕ್ಷೇತ್ರದ ಚನ್ನೇಗೌಡ ಹಾಗೂ ಅವರ ಮಗನಾದ ಸಣ್ಣೇಗೌಡ (ಪಂಪನಗೌಡ) ಎನ್ನುವ ಭ್ರಷ್ಟ ರಾಜಕಾರಣಿಗಳು ತಮ್ಮ ಕೆಲಸ ಗೋಸ್ಕರ ಇವರ ಮೇಲೆ ಸುಮಾರ್ ತಿಂಗಳಿಂದ ದೌರ್ಜನ್ಯ , ಕಿರುಕುಳ, ತಮ್ಮ ಅಧಿಕಾರ ದರ??ವನ್ನು ತೋರಿ ಮತ್ತು ಜಾತಿ ನಿಂದೇನೆಯನ್ನು ಮಾಡಿ ಮಾನಸಿಕವಾಗಿ ಚಿತ್ರಹಿಂಸೆ ನೀಡಿದ್ದರಿಂದ ಖಿನ್ನತೆಗೆ ಒಳಗಾಗುವಂತೆ ಮಾಡಿದ್ದು , 30 ಲಕ್ಷ ರೂಪಾಯಿಗಳು ಲಂಚಕ್ಕೆ ಬೇಡಿಕೆ ಇಟ್ಟು ಇವರನ್ನು ಮಾನಸಿಕವಾಗಿ ಕುಗ್ಗುವಂತೆ ಒತ್ತಡ ಎರಿ , ಭಯಪಡುವ ರೀತಿಯಲ್ಲಿ ಹೆದರಿಸಿ ಹೃದಯಘಾತ ಆಗುವಂತೆ ಮಾಡಿರುತ್ತಾರೆ. ಪಿ ಎಸ ಐ ಪರಶುರಾಮ್ ಅವರ ಈ ಧಾರಣ ಸಾವು ಘಟನೆಯನ್ನು ಸಿಬಿಐಗೆ ವಹಿಸಿ ತನಿಖೆ ಆಗಬೇಕು, ಭ್ರಷ್ಟ ರಾಜಕಾರಣಿಗಳನ್ನು ತಕ್ಷಣ ಬಂಧಿಸಬೇಕು ಹಾಗೂ ಅಧಿಕಾರದಿಂದ ಕೆಳಗಿಳಿಸಬೇಕು ತಪ್ಪಿತಸ್ಥರನ್ನು ಕಠಿಣವಾದ ಶಿಕ್ಷೆಗೆ ಒಳಪಡಿಸಿ ಅವರನ್ನು ಗಡಿಪಾರು ಮಾಡಬೇಕು. ಕರ್ನಾಟಕದಲ್ಲಿ ರಾಜಕಾರಣಿಗಳಿಂದ ಇತ್ತೀಚಿನ ದಿನಗಳಲ್ಲಿ ದಲಿತರ ಮೇಲೆ ಹಾಗೂ ದಲಿತ ನೌಕರರ ಮೇಲೆ ದೌರ್ಜನ್ಯ, ದಬ್ಬಾಳಿಕೆ , ಮೋಸ , ವಂಚನೆ , ಅನ್ಯಾಯ ಹೆಚ್ಚಾಗುತ್ತಿದ್ದು ಹಾಗೂ ಅವರ ಅಧಿಕಾರ ದರ??ದಂದ ಆಗುವುದನ್ನು ತಡೆದು , ದಲಿತರಿಗೆ ನ್ಯಾಯ ಒದಗಿಸುವ ಕೆಲಸ ಆಗಬೇಕು ,ಇಲ್ಲದಿದ್ದರೆ ನಮ್ಮ ಸಂಘಟನೆಯೂ ಕರ್ನಾಟಕ ರಾಜ್ಯಾದ್ಯಂತ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ ಎಂದು ನಮ್ಮ ಸಂಘಟನೆಯಿಂದ ಎಚ್ಚರಿಕೆ ಸಂದೇಶ ರವಾನಿಸುತ್ತೇವೆ.

ಮುಖ್ಯಮಂತ್ರಿಯವರು ಈ ಅನ್ಯಾಯಕ್ಕೆ ತಾವು ಪಕ್ಷಪಾತವಿಲ್ಲದೆ ಸಿಬಿಐ ತನಿಖೆಯನ್ನು ನಡೆಸಿ, ಈ ಅಧಿಕಾರಿಗೆ ಹಾಗೂ ದಲಿತ ಸಮುದಾಯಕ್ಕೆ ನ್ಯಾಯ ಒದಗಿಸಿಕೊಳ್ಳಬೇಕೆಂದು ಕರ್ನಾಟಕ ಸರ್ಕಾರ ಗೃಹ ಸಚಿವರಿಗೆ ಕೊಪ್ಪಳ ಅಪಾರಜಿಲ್ಲಾಧಿಕಾರಿಗಳ ಮುಖಾಂತರ ಮನವಿಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಘಟನೆಯ ರಾಜ್ಯ ಸದಸ್ಯರಾದ ಹಾಸನದ ರಾಜು ಆರ್ಮಿ, ಹನುಮಂತಪ್ಪ ದೊಡ್ಮನಿ, ಸಂಘಟನೆಯ ಮುಖಂಡರಾದ ರಾಮಣ್ಣ ಚೌಡ್ಕಿ, ನರಸಪ್ಪ ಹಾಸಗಲ್ , ಹನುಮಂತಪ್ಪಹ್ಯಾಟಿ, ಪಾಮಣ್ಣ ಅರಗೋಲಿಗರ್, ಮೈಲಾರಪ್ಪ ಇಂದರಗಿ , ದುರ್ಗೇಶ್ ನವಲಹಳ್ಳಿ , ಮಂಜುನಾಥ್ ಕೋಳೂರು, ಕನಕಪ್ಪ ಕನಕಗಿರಿ , ಯಮನೂರಪ್ಪ ದೊಡ್ಮನಿ , ಯಮನೂರಪ್ಪ ಧನಕನ ದೊಡ್ಡಿ, ಎಮ್ ರವಿಕುಮಾರ, ಗವಿಸಿದ್ದಪ್ಪ ಬಂಡಿ , ಹನುಮೇಶ್ ಇಂದ್ರಗಿ , ಹನುಮಂತಪ್ಪ ಕಟ್ಟಿಮನಿ ಹನುವಾಳ , ಮಾಂತೇಶ್ ಕೊಳುರ , ಆರತಿ ಮಂಜುನಾಥ್ ಗಂಗಾವತಿ, ಭಾಷಾ ಹನುವಾಳ ಮುಂತಾದ ಸಂಘಟಕರು ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

# ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಅದ್ದೂರಿ ಆಚರಣೆ: ಎಡಿಸಿ

**ಕೊಪ್ಪಳ:** ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ಆಗಸ್ಟ್ 20ರಂದು ಬ್ರಹ್ಮಶ್ರೀ ನಾರಾಯಣಗುರು ಜಯಂತಿಯನ್ನು ಜಿಲ್ಲಾಡಳಿತದಿಂದ ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಹೇಳಿದರು.

ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಆಚರಣೆ ಕುರಿತಂತೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಗಸ್ಟ್ 08ರಂದು ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬ್ರಹ್ಮಶ್ರೀ ನಾರಾಯಣಗುರುಗಳ ಜಯಂತಿ ಆಚರಣೆ ಸಮಾರಂಭವನ್ನು ಆ.20ರಂದು ಬೆಳಿಗ್ಗೆ 10 ಗಂಟೆಗೆ ನಗರದ ಸಾಹಿತ್ಯ



ಭವನದಲ್ಲಿ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಬ್ರಹ್ಮಶ್ರೀ ನಾರಾಯಣಗುರುಗಳ ಕುರಿತು ವಿಶೇಷ ಉಪನ್ಯಾಸ ಜರುಗಲಿದೆ.

ಜಿಲ್ಲೆಯ ಎಲ್ಲ ಶಾಲಾ, ಕಾಲೇಜುಗಳಲ್ಲಿ ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಬ್ರಹ್ಮಶ್ರೀ ನಾರಾಯಣಗುರುಗಳ ಜಯಂತಿಯನ್ನು ಆಚರಿಸುವಂತೆ ಇಲಾಖೆಗಳು ಕ್ರಮ ಕೈಗೊಳ್ಳಬೇಕು. ಶಿಷ್ಠಾಚಾರದಂತೆ ಕಾರ್ಯಕ್ರಮವನ್ನು ಸುವ್ಯವಸ್ಥಿತವಾಗಿ ಹಮ್ಮಿಕೊಳ್ಳಲು ಹಾಗೂ ಮೆರವಣಿಗೆಗಾಗಿ ಎಲ್ಲಾ ರೀತಿಯ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮಕ್ಕೆ ಎಲ್ಲ ಸಮಾಜದ ಮುಖಂಡರು, ಸಾರ್ವಜನಿಕರು ಆಗಮಿಸುವಂತೆ ಅಪರ ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಂಶುಪಾಲರದ ಕೃಷ್ಣಮೂರ್ತಿ ದೇಸಾಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಎ.ಬಸವರಾಜ, ಸಮಾಜದ ಮುಖಂಡರಾದ ಈರಣ್ಣ ಹುಲಿಗಿ, ಗಿರೀಶ ಬಿ., ಮಂಜಪ್ಪ, ರಮೇಶ, ರಾಘವೇಂದ್ರ, ಬಸವರಾಜ, ರಾಮಣ್ಣ ಸೇರಿದಂತೆ ಇನ್ನೂ ಪ್ರಮುಖರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ದೇವಸ್ಥಾನ ಅಭಿವೃದ್ಧಿ ಕಾಮಗಾರಿಗೆ ಕಾಂಗ್ರೆಸ್ ಸರಕಾರದಿಂದ ತಡೆ: ಸವದಿ

**ರಬಕವಿ-ಬನಹಟ್ಟಿ :** ಕಳೆದ ಅವಧಿಯಲ್ಲಿ ತೇರದಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ದೇವಸ್ಥಾನ, ಸಮುದಾಯ ಜೀರ್ಣೋದ್ಧಾರ ಸಲುವಾಗಿ ಹತ್ತು ಕೋಟಿ ರೂ.ಗಳ ಕಾಮಗಾರಿ ಮಂಜೂರಿಯನ್ನು ಕಾಂಗ್ರೆಸ್ ಸರ್ಕಾರ ತಡೆ ಹಿಡಿದಿದೆ ಎಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.



ಬನಹಟ್ಟಿಯಲ್ಲಿ ಬುಧವಾರ ಹಳೆ ಯಲ್ಲಮ್ಮದೇವಿ ದೇವಸ್ಥಾನದ ಸಮುದಾಯ ಭವನ ಹಾಗು ವಾಣಿಜ್ಯ ಸಂಕೀರ್ಣ ಉದ್ಘಾಟಿಸಿ ಮಾತನಾಡಿದ ಅವರು, ಸದ್ಯ ರಾಜ್ಯದಲ್ಲಿ ಅನುದಾನಗಳಿಂದ ನಡೆಯುತ್ತಿರುವ ಕಾಮಗಾರಿಗಳೆಲ್ಲವೂ ಬಿಜೆಪಿ ಸರ್ಕಾರದ ಅವಧಿಯಲ್ಲಿನವು. ಈಗಿನ ಸರ್ಕಾರದಿಂದ ನಯಾ ಪೈಸೆಯಷ್ಟೂ ಅನುದಾನ ಬಾರದಿರುವದು ಅಭಿವೃದ್ಧಿಗೆ ಹಿಡಿದ ಕನ್ನಡಿಯಾಗಿದೆ ಎಂದು ಸವದಿ ಲೇವಡಿ ಮಾಡಿದರು.

ಕ್ಷೇತ್ರಾದ್ಯಂತ ಸಮುದಾಯ ಭವನಗಳು ಸೇರಿದಂತೆ ಇತರೆ ಕಾಮಗಾರಿಗಳೆಲ್ಲವೂ ಅನುದಾನವಿಲ್ಲದೆ ಅರ್ಧಕ್ಕೆ ನಿಂತಿವೆ.

ಬಡವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಟ್ರಸ್ಟ್‌ಗಳಿಗೆ ಸಹಕಾರಿಯಾಗುವ ಬದಲು ಕಾಂಗ್ರೆಸ್ ಸರ್ಕಾರ ಮಾರಕವಾಗಿದೆ ಎಂದು ಸವದಿ ಟೀಕಿಸಿದರು.

ನೂರು ಕೋಟಿ ಅಭಿವೃದ್ಧಿ: ಶಾಸಕನಾಗಿ ಸೇವೆ ಸಲ್ಲಿಸುತ್ತಿರುವ ನನ್ನ ಅವಧಿಯಲ್ಲಿ ನೂರು ಕೋಟಿ ರೂ.ಗಳಷ್ಟು ಸಮುದಾಯ ಭವನ ಸೇರಿದಂತೆ ಇತರೆ ಯೋಜನೆಗಳಿಗೆ ಅನುದಾನ ಒದಗಿಸುವಲ್ಲಿ ತೃಪ್ತಿ ಹೊಂದಿದ್ದೇನೆ. ಇನ್ನೂ ಅನೇಕ ಅಭಿವೃದ್ಧಿ ನಡೆಯಬೇಕಿದ್ದು, ಸರ್ಕಾರದ ಸಮರ್ಪಕ ಅಸಹಕಾರದಿಂದ ಕುಂಠಿತವಾಗುವಂತಾಗಿದೆ ಎಂದರು.

ಸಾನಿಧ್ಯ ವಹಿಸಿದ್ದ ಹಿರೇಮಠದ ಶರಣಬಸವ ಶಿವಾಚಾರ್ಯರು ಮಾತನಾಡಿ, ಸಮುದಾಯ ಭವನಗಳಿಂದ ಬಂದ ರೈತ ಹಾಗು ನೇಕಾರ ಸಮುದಾಯಗಳ ಕಾರ್ಯಕ್ರಮಗಳಿಗೆ ಸಹಕಾರಿಯಾಗಲಿವೆ ಎಂದರು.

ತಹಶೀಲ್ದಾರ ಗಿರೀಶ ಸ್ವಾದಿ, ಪೌರಾಯುಕ್ತ ಜಗದೀಶ ಈಟಿ, ಸಿದ್ಧನಗೌಡ ಪಾಟೀಲ, ಜಯಶ್ರೀ ಬಾಗೇವಾಡಿ, ಗಂಗಪ್ಪ ಮುಗತಿ, ರವಿ ಅಬಕಾರ, ಮಹೇಶ ಮುಗತಿ, ಗೋವಿಂದ ಪಾತ್ರೋಟ, ಈಶ್ವರ ಪೂಜಾರಿ, ನವೀನ ಬಾಣಕಾರ, ಸೋಮು ಅಬಕಾರ, ಸಿದ್ದು ಶೀಲವಂತ, ಪರಪ್ಪ ಮುಗತಿ, ದುಂಡಪ್ಪ ಕರಲಟ್ಟಿ, ದುಂಡಯ್ಯ ಕಾಡದೇವರ, ನಿಜು ಮುಗತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬ್ಯಾಂಕರ್ಸ್‌ಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ

## ಸಾಲ ಮಂಜೂರಾತಿಗಾಗಿ 15 ದಿನಗಳ ಗಡುವು: ಸಿಇಓ ಕುರೇರ

**ಬಾಗಲಕೋಟೆ :** ಸರಕಾರದ ವಿವಿಧಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬ್ಯಾಂಕ್‌ಗಳಲ್ಲಿ ಸಾಲ ಮಂಜೂರಾತಿಗಾಗಿ ಬಾಕಿ ಇರುವ ಎಲ್ಲ ಅರ್ಜಿಗಳನ್ನು ಇತ್ಯರ್ಥಪಡಿಸುವಂತೆ ಜಿ.ಪಂ ಸಿಇಓ ಶಶಿಧರ ಕುರೇರ 15 ದಿನಗಳ ಗುಡುವು ನೀಡಿದರು.





ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಬುಧವಾರ ಜಿಲ್ಲಾ ಅಗ್ರಣಿ ಬ್ಯಾಂಕ್ ವತಿಯಿಂದ ಜರುಗಿದ ಬ್ಯಾಂಕರ್ಸ್‌ಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸರಕಾರದ ಯೋಜನೆಗಳಿಗೆ ಬ್ಯಾಂಕುಗಳು ಸಾಲ ಕೊಡದೇ ಇದ್ದರೆ ಹೇಗೆ. ಹೀಗಾದರೆ ಯೋಜನೆಗಳು ಹೇಗೆ ಅನುಷ್ಠಾನಗೊಳ್ಳಬೇಕು ಎಂದು ಪ್ರಶ್ನಿಸಿದರು. ಕಾಟಾಚಾರಕ್ಕೆ ಸಭೆಗೆ ಬರಬೇಡಿ, ಕೇವಲ ಸಭೆ ನಡೆಸುವುದು, ನಿರ್ದೇಶನ ನೀಡುವುದು ಆಗುತ್ತಿದೆ. ಯಾವುದೇ ರೀತಿಯ ಕೆಲಸವಾಗುತ್ತಿದೆ. ಇದನ್ನು ಕಂಡು ಅಸಮಾಧಾನ ವ್ಯಕ್ತಪಡಿಸಿದರು.

ಹಿಂದಿನ ವರ್ಷಗಳ ಅರ್ಜಿಗಳು ಶೇ.50 ರಷ್ಟು ಬಾಕಿ ಉಳಿದವೆ. ಎಸ್.ಬಿ.ಐ ಬ್ಯಾಂಕಿಗೆ ಹೆಚ್ಚಿನ ಅರ್ಜಿ ಬಾಕಿ ಇದ್ದು, ಕೂಡಲೇ ವಿಲೆಯಾಗಬೇಕು. ಕಳೆದ 6 ತಿಂಗಳುಗಟ್ಟಲೇ ಅರ್ಜಿಗಳನ್ನು ಇಟ್ಟುಕೊಂಡರೆ ಹೇಗೆ. ಅರ್ಹತೆ ಇದ್ದವರಿಗೆ ಸಾಲ ವಿತರಿಸಬೇಕು. ದಾಖಲಾತಿ ಸರಿಯಾಗಿ ಇರದಿದ್ದರೆ ರಿಜೆಕ್ಟ ಮಾಡಲು ತಿಳಿಸಿದರು. ಸಂಬಂಧಿಸಿದ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿಕೊಂಡು 15 ದಿನಗಳ ಒಳಗಾಗಿ ಎಲ್ಲ ಅರ್ಜಿಗಳ ವಿಲೆ ಮಾಡಬೇಕು. ಬಾಕಿ ಉಳಿದಲ್ಲಿ ಸಂಬಂಧಿಸಿದ ಬ್ಯಾಂಕ್‌ಗಳ ಮೇಲಾಧಿಕಾರಿಗಳಿಗೆ ಶಿಸ್ತುಕ್ರಮಕ್ಕಾಗಿ ಪತ್ರ ಬರೆಯಲಾಗುವುದೆಂದು ಎಚ್ಚರಿಕೆ ನೀಡಿದರು.

ಜಿಲ್ಲಾ ಅಗ್ರಣೀಯ ಬ್ಯಾಂಕಿನ ವ್ಯವಸ್ಥಾಪಕ ರಾಜಕುಮಾರ ಹೂಗಾರ ಅವರು ಮಾರ್ಚ 24ಕ್ಕೆ ಕೊನೆಗೊಂಡ ತ್ರೈಮಾಸಿಕ ಡಿಎಲ್‌ಆರ್‌ಸಿ ಸಭೆಯ ಕಾರ್ಯಸೂಚಿಯ ಬಗ್ಗೆ ಸಭೆಗೆ ತಿಳಿಸಿದರು. ಆದ್ಯತಾ ವಲಯದಲ್ಲಿ ಕೃಷಿಗೆ ಸಂಬಂಧಿಸಿದಂತೆ ಶೇ.100.56 ರಷ್ಟು ಸಾಧನೆ ಮಾಡಲಾಗಿದೆ. ಬೆಳೆ ಸಾಲದಲ್ಲಿ ಶೇ.98.27 ರಷ್ಟು, ಇತರೆ ಕೃಷಿ ಸಾಲದಲ್ಲಿ ಶೇ.107.67 ರಷ್ಟು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಶೇ.91.24 ರಷ್ಟು, ಇತರೆ ಆದ್ಯತಾ ವಲಯಕ್ಕೆ 64.16 ರಷ್ಟು ಸಾಲ ವಿತರಣೆ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಭಾರತೀಯ ರಿಜರ್ವ ಬ್ಯಾಂಕಿನ ಅಗ್ರಣೀಯ ಜಿಲ್ಲಾ ಅಧಿಕಾರಿ ಜಯಶ್ರೀ ಮಾತನಾಡಿ ಆರ್ಥಿಕ ಸಾಕ್ಷರತೆಯನ್ನು ಉತ್ತೇಜಿಸುವ ಉದ್ದೇಶದಿಂದ 2024ರ ಆರ್ಥಿಕ ಸಪ್ತಾಹವನ್ನು ಜೂನ್ 26 ರಿಂದ ಮಾರ್ಚ 1, 2024ವರೆಗೆ ಸರಿಯಾಗಿ ಪ್ರಾರಂಭಿಸಿ-ಆರ್ಥಿಕವಾಗಿ ಸ್ಮಾರ್ಟ ಆಗಿರಿ ಎಂಬ ವಿಷಯದ ಮೇಲೆ ಆಚರಿಸಲಾಗುತ್ತಿದೆ. ಈ ವರ್ಷ ಯುವ ವಯಸ್ಕರನ್ನು ಮುಖ್ಯವಾಗಿ ವಿದ್ಯಾರ್ಥಿಗಳನ್ನು ಗುರಿಯನಾಗಿಟ್ಟುಕೊಳ್ಳಲಾಗಿದೆ. ಚಿಕ್ಕ ವಯಸ್ಸಿನಿಂದಲೇ ಆರ್ಥಿಕ ಶಿಸ್ತನ್ನು ರೂಢಿಸಿಕೊಳ್ಳುವ ಪ್ರಯೋಜನಗಳ ಬಗ್ಗೆ ಅರಿವು ಮೂಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಾಲ ಯೋಜನೆಯ ಮಾರ್ಗದರ್ಶಿ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಸಭೆಯಲ್ಲಿ ನಬಾರ್ಡನ ಡಿಡಿಎಂ ಮಂಜುನಾಥ ರೆಡ್ಡಿ, ಕೆನರಾ ಬ್ಯಾಂಕಿನ ರೀಜನಲ್ ಮ್ಯಾನೇಜರ್ ಶೈಲಜಾ ಕೆ.ಎಂ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನ ರಿಜಿನಲ್ ಮ್ಯಾನೇಜರ್ ರಾಜಶೇಖರ, ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಬ್ಯಾಂಕಿನ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಜನಸಂಪರ್ಕ ಸಭೆ: ಬೇಗನೆ ಅರ್ಜಿಗಳನ್ನು ವಿಲೇವಾರಿ ಮಾಡಿ

**ಯಲ್ಲಟ್ಟಿ ಗ್ರಾಮದಲ್ಲಿ ಸರ್ಕಾರಿ ಶಾಲೆಗೆ ಜಾಗೆ ನೀಡಿ | ಬನಹಟ್ಟಿ ಪೊಲೀಸ್ ಠಾಣೆ ವ್ಯಾಪ್ತಿಗೆ ರಬಕವಿ ನಗರವನ್ನು ಸೇರಿಸಿ | ಮಹಿಷವಾಡಗಿ ಸೇತುವೆ ಕಾಮಗಾರಿಯನ್ನು ಬೇಗನೆ ಮುಗಿಸಿ**

**ರಬಕವಿ-ಬನಹಟ್ಟಿ :** ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸಿ ಮನಸ್ಸಿಟ್ಟುಕೊಂಡು ಅರ್ಜಿಗಳನ್ನು ವಿಲೇವಾರಿ ಮಾಡುವ ನಿಟ್ಟಿನಲ್ಲಿ ಗಮನ ನೀಡಬೇಕು. ವಿವಿಧ ಇಲಾಖೆಯ ಅಧಿಕಾರಿಗಳುತಮ್ಮಕಾರ್ಯಾಲಯದವ್ಯಾಪ್ತಿಗೆ ಬಂದ ಅರ್ಜಿಗಳಿಗೆ ಬೇಗನೆ ಮುಕ್ತಿ ನೀಡುವ ಕ್ರಮ ತೆಗೆದುಕೊಳ್ಳಬೇಕು. ಕಾರ್ಯ ಮಾಡದೆ ಇದ್ದರೆ ಮುಂದಿನ ದಿನಗಳಲ್ಲಿ ಕಾರ್ಯಾಲಯಕ್ಕೆ ದಿಢೀರ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದೇನೆ. ಅರ್ಜಿಗಳು ವಿಲೇವಾರಿಯಾಗದೆ ಇದ್ದರೆ ಸಹಿಸಿಕೊಳ್ಳುವುದಿಲ್ಲ ಎಂದು ಬಾಗಲಕೋಟೆ ಜಿಲ್ಲಾಧಿಕಾರಿ ಜಾನಕಿ. ಕೆ.ಎಂ. ತಿಳಿಸಿದರು.

ಬುಧವಾರ ರಬಕವಿ-ಬನಹಟ್ಟಿ ತಾಲ್ಲೂಕು ಕಾರ್ಯಾಲಯದಲ್ಲಿ ನಡೆದ ಜನ ಸ್ಪಂದನ ಕಾರ್ಯಕ್ರಮದಲ್ಲಿ ಮಾತನಾಡಿದರು. ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಅಧಿಕಾರಿಗಳು ಹೆಚ್ಚಿನ ಮುತ್ತುವರ್ಜಿ ವಹಿಸಬೇಕು ಎಂದು ಹೇಳಿದರು.

ಕಂದಾಯ ಇಲಾಖೆ, ನಗರಸಭೆಗೆ ಸಂಬಂಧಪಟ್ಟ ಸಮಸ್ಯೆಗಳು ಸಾಕಷ್ಟು ಪ್ರಮಾಣದಲ್ಲಿವೆ. ಇವುಗಳ ಬಗ್ಗೆ ಗಮನ ನೀಡಿ. ನೇಕಾರರ ಸಮಸ್ಯೆ ಕೂಡಾ ಬಹಳಷ್ಟು ಇದೆ. ಅದಕ್ಕೆ ಪರಿಹಾರ ನೀಡುವ ನಿಟ್ಟಿನಲ್ಲಿ ಪ್ರತ್ಯೇಕ ಸಭೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಜಾನಕಿ ತಿಳಿಸಿದರು.

ರಬಕವಿನಗರಕ್ಕೆಬಹಳಷ್ಟುಅನ್ಯಾಯವಾಗುತ್ತಿದೆ. ನಗರದ ಜನರು ಪೊಲೀಸ್ ಠಾಣೆಗಾಗಿ ಹತ್ತು ಕಿ.ಮೀ ದೂರದ ತೇರದಾಳ ಠಾಣೆಗೆ ಹೋಗಬೇಕಾಗಿದೆ. ಕೇವಲ ಒಂದು ಕಿ.ಮೀ ಅಂತರದಲ್ಲಿರುವ ಬನಹಟ್ಟಿ ಪೊಲೀಸ್ ಠಾಣೆಯ ವ್ಯಾಪ್ತಿಗೆ ರಬಕವಿ ನಗರವನ್ನು ಸೇರಿಸಬೇಕು. ನಗರದ 17 ನೇ ವಾರ್ಡ್ ನ್ನು ಮುಳಗಡೆ ಪ್ರದೇಶವೆಂದು ಪರಿಗಣಿಸಿ ಇಲ್ಲಿಯ ಎರಡು ನೂರಕ್ಕೂ ಹೆಚ್ಚು ಜನರಿಗೆ ಪುನರವಸತಿ ಕಲ್ಪಿಸಬೇಕು.

ಸರ್ಕಾರ ರಬಕವಿ ಬನಹಟ್ಟಿ ನಗರವನ್ನು ತಾಲ್ಲೂಕು ಎಂದು ಘೋಷಣೆ ಮಾಡಿದರೂ ಇದುವರೆಗೆ ಬಹುತೇಕ ಸರ್ಕಾರಿ ಕಚೇರಿಗಳು



ಇಲ್ಲಿ ಸ್ಥಾಪನೆಯಾಗಿಲ್ಲ. ಆದ್ದರಿಂದ ಈ ಎಲ್ಲ ಸಮಸ್ಯೆಗಳಿಗೆ ಅಧಿಕಾರಿಗಳು ಕೂಡಲೇ ಸ್ಪಂದಿಸಬೇಕು ಎಂದು ರಬಕವಿ ಬನಹಟ್ಟಿ ನಾಗರಿಕರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ತೇರದಾಳ ತಾಲ್ಲೂಕು ಪ್ರದೇಶಕ್ಕೂ ನೂತನ ಕಚೇರಿಗಳನ್ನು ನೀಡಬೇಕು ಎಂದು ತೇರದಾಳ ಸಾರ್ವಜನಿಕರು ಮನವಿ ಮಾಡಿಕೊಂಡರು.

ಯಲ್ಲಟ್ಟಿ ಗ್ರಾಮದಲ್ಲಿ ಸರ್ಕಾರಿ ಶಾಲೆ, ಪಂಚಾಯ್ತಿ ಕಾರ್ಯಾಲಯ, ಅಂಚೆ ಕಚೇರಿ ಮತ್ತು ಪಶು ಆಸ್ಪತ್ರೆ ನಿರ್ಮಾಣ ಮಾಡಲು ಸೂಕ್ತ ಪ್ರದೇಶವನ್ನು ನೀಡಬೇಕು ಎಂದು ಗ್ರಾಮ ಪಂಚಾಯ್ತಿ ಅಧ್ಯಕ್ಷ ಮಹಾದೇವ ಮೋಪಗಾರ ಮನವಿ ಸಲ್ಲಿಸಿದರು. ರಬಕವಿಯ ಬ್ರಾಹ್ಮಣ ಸಮಾಜದ ಸ್ಮಶಾನಕ್ಕೆ ಸೂಕ್ತ ಭದ್ರತೆಯನ್ನು ನೀಡಬೇಕು ಎಂದು ಮುಖಂಡರು ಮನವಿ ಸಲ್ಲಿಸಿದರು.

ಹೊಸೂರಿನ ಶಾಂತಿ ನಗರದ ಸಾವಿರಾರು ನಿವಾಸಿಗಳು ನಮಗೆ ಹಕ್ಕು ಪತ್ರಗಳನ್ನು ನೀಡಬೇಕು ಎಂದು ಅಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಜಮಖಂಡಿ ಉಪವಿಭಾಗಾಧಿಕಾರಿ ಸಂತೋಷ ಕಾಮಗೌಡ, ತಹಶೀಲ್ದಾರ್ ಗಿರೀಶ ಸ್ವಾದಿ, ತಾಲ್ಲೂಕು ಪಂಚಾಯ್ತಿ ಕಾರ್ಯ ನಿರ್ವಾಹಕ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ, ತೇರದಾಳ ತಹಶೀಲ್ದಾರ ವಿಜಯಕುಮಾರ ಕಡಕೋಳ, ಎಸ್. ಬಿ. ಕಾಂಬಳೆ, ರಬಕವಿ ಬನಹಟ್ಟಿ ನಗರಸಭೆಯ ಪೌರಾಯುಕ್ತ ಜಗದೀಶ ಈಟಿ, ಸಿಪಿಐ ಸಂಜೀವ ಬಳಗಾರ, ಪಿಎಸ್‌ಐ ಶಾಂತಾ ಹಳ್ಳಿ ಸೇರಿದಂತೆ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಕಾದು ಕುಳಿತು ವಾಪಸ್ಸಾದ ಶಾಸಕ ಸವದಿ; ಮಧ್ಯಾಹ್ನ 2-30 ಕ್ಕೆ ಆರಂಭವಾಗಬೇಕಾಗಿದ್ದ ಸಭೆ ನಾಲ್ಕು ಗಂಟೆಗೆ ಆರಂಭವಾಯಿತು. ಸಭೆಯಲ್ಲಿ ಭಾಗವಹಿಸಲು ಆಗಮಿಸಿದ ಶಾಸಕ ಸಿದ್ದು ಸವದಿ ಒಂದು ಗಂಟೆಗಳಿಗಿಂತ ಹೆಚ್ಚು ಕಾಲ ಕಾದು ವಾಪಸ್ಸಾದರು. ಸಭೆಗೆ ಆಗಮಿಸಿದ ಶಾಸಕ ಸವದಿಯವರನ್ನು ಅಧಿಕಾರಿಗಳು ಪರಿಗಣಿಸದೆ ಇರುವುದಕ್ಕೆ ಶಾಸಕ ಸಿದ್ದು ಸವದಿ ಸಭೆಯಲ್ಲಿ ಭಾಗವಹಿಸದೆ ತೆರಳಿದರು.

# ಹುನ್ನೂರ ಶಾಖೆಯ ನೂತನ ಕಟ್ಟಡದ ಉದ್ಘಾಟನೆ



**ರಬಕವಿ-ಬನಹಟ್ಟಿ :** ಆಗಸ್ಟ 14 ರಂದು ಮುಂಜಾನೆ 10-30 ಕ್ಕೆ ಹುನ್ನೂರಿನಲ್ಲಿ ಬನಹಟ್ಟಿ ಹಟಗಾರ ಸಹಕಾರ ಪತ್ತಿನ ಸಂಘ ನಿ., ಇದರ ಹುನ್ನೂರ ಶಾಖೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದು ಬನಹಟ್ಟಿ ಹಟಗಾರ ಸಹಕಾರಿ ಪತ್ತಿನ ಸಂಘದ ಅಧ್ಯಕ್ಷರಾದ ವಿರುಪಾಕ್ಷಪ್ಪ ಕೊಕಟನೂರ ಹೇಳಿದರು.

ಅವರು ಭಾನುವಾರ ಬನಹಟ್ಟಿಯ ಕೇಂದ್ರ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದರು. ಬ್ಯಾಂಕಿನ ವ್ಯವಸ್ಥಾಪಕರಾದ ಸಂಜಯ ಜವಳಗಿ ಮಾತನಾಡಿ, ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಮಹಾಲಿಂಗಪುರ ಸಿದ್ಧಾರೂಢ ಬ್ರಹ್ಮ ವಿದ್ಯಾಶ್ರಮದ ಸಹಜಾನಂದ ಮಹಾಸ್ವಾಮಿಗಳು, ಬನಹಟ್ಟಿ ಹಿರೇಮಠದ ಶರಣಬಸವ ಶಿವಾಚಾರ್ಯರು, ಹುನ್ನೂರಿನ ವಿಶ್ವನಾಥ ಕೊಣ್ಣೂರಮಠ ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ವಿರುಪಾಕ್ಷಪ್ಪ ಕೊಕಟನೂರ ವಹಿಸಲಿದ್ದಾರೆ. ನೂತನ ಕಟ್ಟಡವನ್ನು ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ, ಭದ್ರತಾ ಕೊಠಡಿಯನ್ನು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, ಧ್ವಜಾರೋಹಣವನ್ನು ಬಾಗಲಕೋಟೆ ಸಂಸದ ಪಿ. ಸಿ. ಗದ್ದಿಗೌಡರ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ತೇರದಾಳ ಶಾಸಕ ಸಿದ್ದು ಸವದಿ, ಜಮಖಂಡಿ ಶಾಸಕ ಜಗದೀಶ ಗುಡಗುಂಟಿ, ವಿಧಾನ ಪರಿಷತ್ ಸದಸ್ಯರಾದ ಉಮಾಶ್ರೀ, ಮಾಜಿ ಶಾಸಕ ಆನಂದ ನ್ಯಾಮಗೌಡ, ಕಾಂಗ್ರೆಸ್ ಮುಖಂಡರಾದ ಸಿದ್ದು ಕೊಣ್ಣೂರ, ಬಾಗಲಕೋಟೆ ಬಿ.ಡಿ.ಸಿ.ಸಿ. ಬ್ಯಾಂಕ ಅಧ್ಯಕ್ಷ ಅಜಯಕುಮಾರ ಸರನಾಯಕ, ಉಪಾಧ್ಯಕ್ಷ ಮುರುಗೇಶ್ ಕಡ್ಲಿಮಟ್ಟಿ, ಜಮಖಂಡಿ ಅರ್ಬನ್ ಬ್ಯಾಂಕಿನ ಅಧ್ಯಕ್ಷ ರಾಹುಲ ಕಲೂತಿ, ಉಪಾಧ್ಯಕ್ಷ ಮಾಮೂನ ರಸೀದ ಪಾರ್ಥನಳ್ಳಿ, ಅತಿಥಿಗಳಾಗಿ ಡಾ. ಸುರೇಶಗೌಡ ಪಾಟೀಲ, ಶರಣಬಸವರಾಜ, ದಾನಯ್ಯ ಹಿರೇಮಠ, ಹೆಚ್. ಬಿ. ಪಾಟೀಲ, ರಾಮನಗೌಡ ಬಿ. ಪಾಟೀಲ, ಜಯಶ್ರೀ ಸವದಿ ಸೇರಿದಂತೆ ಸಹಕಾರಿ ಇಲಾಖೆಯ ಅಧಿಕಾರಿಗಳು, ಮುಖಂಡರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಹೇಮಲತಾ ಪಟ್ಟಣ, ರಾಜಕುಮಾರ ಬಾಣಕಾರ, ಮಲ್ಲಿಕಾರ್ಜುನ ಮೋಳೆಗಾಂವಿ, ಮಹಾದೇವ ಬಾಣಕಾರ, ದಾನಪ್ಪ ಹುಲಜತ್ತಿ, ಕಾಡಪ್ಪ ಹಳಿಂಗಳಿ, ಈಶ್ವರ ಹಳ್ಯಾಳ, ದೇವೇಂದ್ರ ಶೀಲವಂತ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಆಹಾರ ಆರೋಗ್ಯ ಒಂದೇ ನಾಣ್ಯದ ಎರಡು ಮುಖಗಳು
# ರಬಕವಿಯಲ್ಲಿ ಪುಸ್ತಕ ಅವಲೋಕನ 32



**ರಬಕವಿ-ಬನಹಟ್ಟಿ :** ಭಾರತೀಯ ಸಂಸ್ಕೃತಿ ಎಂದರೆ ಯೋಗಯುಕ್ತ, ರೋಗ ಮುಕ್ತ ಜೀವನ ಕ್ರಮವಾಗಿದೆ. ಒಳ್ಳೆಯ ಆರೋಗ್ಯದಿಂದ ಮಾತ್ರ ನಮ್ಮಿಂದ ಸದೃಢ ಸ್ವಾಸ್ಥ್ಯ ಸಮಾಜ, ದೇಶ, ವಿಶ್ವ ನಿರ್ಮಾಣವಾಗಲು ಸಾಧ್ಯ. ಆಹಾರದಲ್ಲಿ ಪೋಷಕಾಂಶಗಳು ಆರೋಗ್ಯಕರ ಆಹಾರ ಸೇವನೆ ಜೀವನಶೈಲಿಯ ಬದಲಾವಣೆ ಇವುಗಳ ಮಹತ್ವ ಅರಿತು ಮುನ್ನಡೆದಾಗ ವಿಷವರ್ತುಲದಿಂದ ದೂರವಿರಲು ಸಾಧ್ಯವಾಗುವುದು. ಡಾ. ಪಾಂಗಿಯವರ "ಆಹಾರದಿಂದ ಆರೋಗ್ಯದೆಡೆಗೆ" ಕೃತಿ ಗಮನಾರ್ಹವಾಗಿದೆ. ಪ್ರತಿಯೊಬ್ಬರಿಗೂ ಆಹಾರ ಮತ್ತು ಆರೋಗ್ಯದ ಕುರಿತು ತಿಳಿಸುವ ಸಮಗ್ರವಾದ ಮಾಹಿತಿಯನ್ನೊಳಗೊಂಡ ಉಪಯುಕ್ತ ಕೃತಿಯಾಗಿದೆ ಎಂದು ರಬಕವಿಯ ಅರವಳಿಕೆ ತಜ್ಞ ಡಾ. ರವಿ ಜಮಖಂಡಿ ಹೇಳಿದರು.

ಅಥಣಿಯ ಡಾ. ಅಣ್ಣಪ್ಪ ಪಾಂಗಿಯವರು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ, ತಾಲೂಕಾ ಘಟಕ ರಬಕವಿ ಬನಹಟ್ಟಿ, ವಲಯಗಳು ತೇರದಾಳ, ಮಹಾಲಿಂಗಪುರ ಇವರ ಸಂಯುಕ್ತಾಶ್ರಯದಲ್ಲಿ

ರಬಕವಿಯ ವೈದ್ಯ ಜಿ.ಎಚ್. ಚಿತ್ತರಗಿಯವರ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಂಡಿದ್ದ ಪುಸ್ತಕಾವಲೋಕನ-32 ಕಾರ್ಯಕ್ರಮದಲ್ಲಿ ಅಥಣಿಯ ವೈದ್ಯ ಸಾಹಿತಿ ಅಣ್ಣಪ್ಪ ಅ. ಪಾಂಗಿಯವರ ಆಹಾರದಿಂದ ಆರೋಗ್ಯದೆಡೆಗೆ ಕೃತಿಯನ್ನು ಅವಲೋಕಿಸಿ ಮಾತನಾಡಿದ ಅವರು ಜನಸಾಮಾನ್ಯರಿಗೆ ಆರೋಗ್ಯದ ಹಿತ ದೃಷ್ಟಿಯಿಂದ ಉಪಯುಕ್ತವಾದ ಸರಳ ಹಾಗೂ ಸುಂದರ ಲೇಖನಗಳ ಮೂಲಕ ಆಹಾರದ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ ಒಳ್ಳೆಯ ಆರೋಗ್ಯಕ್ಕಾಗಿ ಸುಂದರ ಬದುಕಿಗಾಗಿ ಪ್ರೇರಣೆ ನೀಡುವ ಕೃತಿ ಇದಾಗಿದೆ. ಹಾಲು ಮೊಟ್ಟೆ ಉತ್ಕೃಷ್ಟ ಆಹಾರ ಪ್ರತಿ ಮನುಷ್ಯನು ಆಹಾರ ಕ್ರಮ ಪಾಲಿಸಬೇಕು. ಶುದ್ಧ ನೀರು ಕುಡಿಯಬೇಕು. ಉತ್ತರ ಕರ್ನಾಟಕ ಆಹಾರ ಉತ್ತಮವಾದದ್ದು ಎಂದರು.

ಅಥಣಿಯ ವೈದ್ಯ ಸಾಹಿತಿ ಅಣ್ಣಪ್ಪ ಅ. ಪಾಂಗಿಯವರು ಸಸಿಗೆ ನೀರು ಹನಿಸುವ ಮೂಲಕ ಪುಸ್ತಕ ಅವಲೋಕನ ಉದ್ಘಾಟಿಸಿದರು ನಂತರ ಸಂವಾದದಲ್ಲಿ ಬಂದ ಪ್ರಶ್ನೆಗಳಿಗೆ ಉತ್ತರಿಸಿದರು.

ಬೇಕರಿ ಐಟಂ ವಿಷಕಾರಿ ರಸ್ತೆ ಬದಿ ಮಾರುವ ಆಹಾರವನ್ನ ಸೇವಿಸಬೇಡಿ ಮನೆಯೊಳಗೆ ಊಟ ಮಾಡಿ ಆಹಾರ ಆರೋಗ್ಯ ಒಂದೇ ನಾಣ್ಯದ ಎರಡು ಮುಖಗಳು ಎಂಬುದನ್ನು ಪ್ರತಿಯೊಬ್ಬರು ಅರಿಯಬೇಕು 90 ವರ್ಷ ದಾಟಿದರೂ ನಗುನಗುತ ಬದುಕಬಹುದು ಜಪಾನ್ ದೇಶದಲ್ಲಿ ಅತಿ ಹೆಚ್ಚು ಶತಾಯುಷಿಗಳಿದ್ದಾರೆ ದೇಹದ ತೂಕದ ಅನುಗುಣವಾಗಿ ಆಹಾರ ಸೇವಿಸಿ ಎಂದರು ಬೋರು ಬಾವಿಯ ನೀರನ್ನು ಪರೀಕ್ಷಿಸದೆ ಕುಡಿಯಬಾರದು ಜಾಹೀರಾತುಗಳಿಗೆ ಮಾರು ಹೋಗಬೇಡಿ ಎಂದರು.

ಎಂ ಎಸ್ ಬದಾಮಿ ಪತ್ರಕರ್ತರಾದ ನೀಲಕಂಠ ದಾತಾರ, ಬಸಯ್ಯ ವಸ್ತ್ರದ, ಹಿರಿಯ ಸಾಹಿತಿ ಡಿ.ಎ. ಬಾಗಲಕೋಟ, ಗೌರಿ ಮಿಳ್ಳಿ, ಮಲ್ಲೇಶಪ್ಪ ಕುಚನೂರ, ರವೀಂದ್ರ ಅಷ್ಟಗಿ ಸಂವಾದದಲ್ಲಿ ಪ್ರಶ್ನೆಗಳನ್ನು ಕೇಳಿದರು.

ರಬಕವಿಯ ಡಾ. ಜಿ. ಎಚ್ ಚಿತ್ತರಗಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರತಿಯೊಬ್ಬರು ಆಹಾರದ ಮಹತ್ವ ಅರಿತು ಜೀವನ ಸುಖಮಯವಾಗಿಸಿಕೊಳ್ಳಲು ತಿಳಿಸಿದರು.

ರಬಕವಿ ಬನಹಟ್ಟಿ ತಾಲ್ಲೂಕಾ ಕಸಾಪ ಅಧ್ಯಕ್ಷ ಮ.ಕೃ. ಮೇಗಾಡಿ ಪ್ರಾಸ್ತಾವಿಕವಾಗಿ ಮಾತನಾಡಿ ಸೆಪ್ಟೆಂಬರ್ ತಿಂಗಳು ಶ್ರೀ ಸಿದ್ಧೇಶ್ವರ ಶ್ರೀಗಳ ಭಗವತ್ ಚಿಂತನೆ, ಅಕ್ಟೋಬರ್ ತಿಂಗಳು ಸಿದ್ಧರಾಜ ಪೂಜಾರಿಯವರ ಗೀತ ಗಾಂಧಾರ, ನವ್ಹಂಬರ್ ತಿಂಗಳು ಮಂಕುತಿಮ್ಮನ ಕಗ್ಗ, ಡಿಸೆಂಬರ್ ತಿಂಗಳು ಎಂ.ಎಸ್. ಬದಾಮಿಯವರ ಆರ್ಥಿಕ ಪ್ರಬಂಧಗಳು, ಜನೇವರಿಯಲ್ಲಿ ಶಿವಾನಂದ ದಾಶಾಳ ಅವರ ಶರಣ ಸಂಗಮ ಕೃತಿಗಳ ಅವಲೋಕನ ತಾಲೂಕಿನ ವಿವಿದೆಡೆ ನಡೆಯಲಿದೆ ಎಂದರು.

ಕಸಾಪ ಜಿಲ್ಲಾ ಅಧ್ಯಕ್ಷರಾದ ಶಿವಾನಂದ ಶೆಲ್ಲಿಕೇರಿ, ಮಹಾಲಿಂಗಪುರ ವಲಯ ಅಧ್ಯಕ್ಷ ಬಸವರಾಜ ಮೇಟಿ, ಮಲ್ಲಿಕಾರ್ಜುನ ಹೆಗ್ಗಳಗಿ, ಜಿ.ಎಸ್. ವಡಗಾವಿ, ಇಂದೂಧರ ಬೆಳಗಲಿ, ದಾನಪ್ಪ ಆಸಂಗಿ, ಯಶವಂತ ವಾಜಂತ್ರಿ, ಚಿದಾನಂದ ಸೊಲ್ಲಾಪುರ, ಡಾ. ಬಿ.ಎನ್. ಬಾಗಲಕೋಟ, ಡಾ. ಸಂಗಮೇಶ ಹತಪಾಕಿ, ಸಂಗಮೇಶ ಚಿತ್ತರಗಿ, ಈರಣ್ಣ ಗಣಮುಖಿ, ಎಸ್.ಡಿ. ಅರಬಳ್ಳಿ, ಶೋಭಾ ಅರಬಳ್ಳಿ, ಮೃತ್ಯುಂಜಯ ರಾಮದುರ್ಗ, ಬಿ.ಎಂ. ಮಟ್ಟಿಕಲ್ಲಿ ಉಪಸ್ಥಿತರಿದ್ದರು.

ನಂದಾ ಕೊಕಟನೂರ ಪ್ರಾರ್ಥಿಸಿದರು. ಚಂದ್ರಕಾಂತ ಹೊಸೂರ ನಿರೂಪಿಸಿದರು. ಶಿವಾನಂದ ದಾಶಾಳ ವಂದಿಸಿದರು.

# ರಾಮಪುರದಲ್ಲಿ ಸಂಭ್ರಮದ ಜಾತ್ರಾ ಮಹೋತ್ಸವ



**ರಬಕವಿ-ಬನಹಟ್ಟಿ :** ತಾಲೂಕಿನ ರಾಮಪುರದಲ್ಲಿ ಶ್ರೀ ವೀರಭದ್ರೇಶ್ವರ, ಶ್ರೀ ಮಲ್ಲಿಕಾರ್ಜುನ ದೇವರ 36 ನೇ ಜಾತ್ರಾ ಮಹೋತ್ಸವ ಸಂಭ್ರಮ ಸಡಗರದಿಂದ ಶನಿವಾರ ನಡೆಯಿತು.

ಮುಂಜಾನೆ 10 ಗಂಟೆಗೆ ಶ್ರೀ ವೀರಭದ್ರೇಶ್ವರ, ಶ್ರೀ ಮಲ್ಲಿಕಾರ್ಜುನ ದೇವರ ಪಲ್ಲಕ್ಕಿ ಉತ್ಸವ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಿತು. ನಂತರ ಅಗ್ನಿ ಹಾಯುವ ಕಾರ್ಯಕ್ರಮ ಪುರವಂತರಿಂದ ನಡೆಯಿತು.

ಕಾರ್ಯಕ್ರಮದಲ್ಲಿ ಬಸವಪ್ರಭು ಹಟ್ಟಿ, ಪರಪ್ಪ ಬಿಳ್ಳೂರ, ಶಿವಪುತ್ರಪ್ಪ ಮುರಗುಂಡಿ, ಈರಪ್ಪ ಗೌಡ್ರು, ಮಲ್ಲಪ್ಪ ಆರಗಿ, ಸುರೇಶ ಗೊಲಬಾವಿ, ರುದ್ರಪ್ಪ ಅರಳಿಕಟ್ಟಿ, ಲಕ್ಷ್ಮಣ ತಳವಾರ, ಸುನಿಲ ವಜ್ರಮಟ್ಟಿ, ಧನಂಜಯ ಹೊಸಕೋಟಿ ಸೇರಿದಂತೆ ಎಲ್ಲ ಕಾರ್ಯಕರ್ತರು ಹಾಗೂ ಸಕಲ ಸದ್ಭಕ್ತರು ಉಪಸ್ಥಿತರಿದ್ದರು.

# ಜ್ಞಾನಯೋಗಿ ಕಾಲೇಜಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಚಾಲನೆ
# ಶಿಕ್ಷಣದ ಜತೆಗೆ ದೇಶದ ಸಂಸ್ಕಾರ ಮತ್ತು ಸಂಸ್ಕೃತಿ ಬೆಳೆಸಿ



**ತೇರದಾಳ :** ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಮಾದರಿ ಆಗಿರುವ ದೇಶದ ಸಂಸ್ಕೃತಿ ನಮ್ಮ ದೇಶದ ಪ್ರತಿಬಿಂಬವಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ದೇಶದ ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಬೆಳೆಸುವ ಸಂಕಲ್ಪ ಮಾಡಬೇಕೆಂದು ಬನಹಟ್ಟಿಯ ವಿಶ್ರಾಂತ ಗ್ರಂಥಪಾಲಕ ವೈ.ಬಿ. ಕೊರಡೂರ ಹೇಳಿದರು.

ಸಸಾಲಟ್ಟಿ ಗ್ರಾಮದ ಜ್ಞಾನಯೋಗಿ ಪಿಯು ಕಾಲೇಜಿನಲ್ಲಿ ಪ್ರಸಕ್ತ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಚಾಲನೆ ನೀಡಿ ಮಾತನಾಡಿದರು. ಜಗತ್ತಿನ ಬೇರೆ ರಾಷ್ಟ್ರಗಳ ಅಂಶಗಳು ನಮಗೆ ಗೊತ್ತಿರಬೇಕು. ಹೊರತು ಅವುಗಳ ಮುಂದೆ ನಮ್ಮ ಸಂಸ್ಕೃತಿ ಮರೆಯುವಂತಾಗಬಾರದು. ಆ ದಿಸೆಯಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಹಾಗೂ ಯುವಕರ ಕೊಡುಗೆ ಶ್ರೇಷ್ಠವಾಗಿದೆ ಎಂದು ಹೇಳಿದರು.

ಡಾ. ಸುರೇಶ ಸಲಬನ್ನವರ ಮಗಯ್ಯ ಹಿರೇಮಠ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ದೊರೆಯುವಂತಾಗಲಿ ಎಂಬ ಸದುದ್ದೇಶದಿಂದ ಸಂಸ್ಥೆಯನ್ನು ಹುಟ್ಟು ಹಾಕಲಾಗಿದೆ. ಗ್ರಾಮದ ವಿದ್ಯಾರ್ಥಿಗಳು ಕೂಡ ಇದನ್ನು ಸದುಪಯೋಗ ಪಡೆದುಕೊಳ್ಳುವ ಮೂಲಕ ಗ್ರಾಮದ ಹಿರಿಮೆ ಹೆಚ್ಚಿಸುತ್ತಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಹಾಲಿಂಗ ಶೇಗುಣಸಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅನ್ನಪೂರ್ಣ ಕೊರಡೂರ, ಸುರೇಂದ್ರ ಪಾಟೀಲ, ರಾಜಶೇಖರ ಜಲಪೂರ, ಮುತ್ತಪ್ಪ ಕಾಪಶಿ, ಬನಪ್ಪ ಬೆವನೂರ, ಇದ್ದರು.

# ಗದಗ ಹಾಗೂ ಶಿರಹಟ್ಟಿ ವಿಧಾನಸಭಾ ಕ್ಷೇತ್ರ ಎಸ್‌ಡಿಪಿಐ ಪಕ್ಷದ ನೂತನ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಆಯ್ಕೆ



**ಗದಗ :** ಸೋಶಿಯಲ್ ಡೆಮೋಕ್ರ್ಯಾಟಿಕ್ ಪಾರ್ಟಿ ಆಫ್ ಇಂಡಿಯಾ ಗದಗ ಜಿಲ್ಲಾ ಸಮಿತಿಯ ವತಿಯಿಂದ ಪಕ್ಷದ ಆಂತರಿಕ ಚುನಾವಣೆ ಭಾಗವಾಗಿ ನಡೆದ ಗದಗ ಹಾಗೂ ಶಿರಹಟ್ಟಿ ವಿಧಾನಸಭಾ ಕ್ಷೇತ್ರದ ಚುನಾವಣೆ 13/08/2024 ರಂದು ಪಕ್ಷದ ಜಿಲ್ಲಾ ಕಚೇರಿಯಲ್ಲಿ ನಡೆಯಿತು. ಚುನಾವಣಾಧಿಕಾರಿಗಳಾಗಿ ಆಗಮಿಸಿದ ರಾಜ್ಯ ಸಮಿತಿ ಸದಸ್ಯರು ಹಾಗೂ ಗದಗ ಜಿಲ್ಲಾ ಪಕ್ಷದ ಉಸ್ತುವಾರಿಗಳಾದ ರಂಜಾನ್ ಕಡಿವಾಲ್ ಅವರು ಪಕ್ಷದ ಜಿಲ್ಲಾಧ್ಯಕ್ಷರಾದ ಬಿಲಾಲ್ ಗೋಕಾವಿ ಅವರ ಅಧ್ಯಕ್ಷತೆಯಲ್ಲಿ ಚುನಾವಣೆ ಪ್ರಕ್ರಿಯೆ ನಡೆಸಿ ಪಕ್ಷದ ನೂತನಪದಾಧಿಕಾರಿಗಳನ್ನುಆಯ್ಕೆಮಾಡಲಾಯಿತು. ಚುನಾವಣೆಗು ಮುನ್ನ ಪ್ರಾಸ್ತವಿಕವಾಗಿ ಮಾತನಾಡಿದ ರಂಜಾನ್ ಕಡಿವಾಳ್ ಅವರು ಚುನಾವಣೆ ಅನ್ನೊಂದು ಒಂದು ಒಳ್ಳೆಯ ನಾಯಕನನ್ನು

ಆಯ್ಕೆಗೊಳಿಸಲು ಸಿಗುವ ಒಳ್ಳೆಯ ಅವಕಾಶ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಎಲ್ಲ ಕಾರ್ಯಕರ್ತರು ನಿಮ್ಮ ನಾಯಕರನ್ನು ಆಯ್ಕೆಗೊಳಿಸಿ ಮತ್ತು ಅವರ ನಾಯಕತ್ವದಲ್ಲಿ ಎಲ್ಲರ ಸಹಕಾರದೊಂದಿಗೆ ಎಸ್‌ಡಿಪಿಐ ಪಕ್ಷ ಗದಗ ಜಿಲ್ಲೆಯಲ್ಲಿ ಇನ್ನು ಎತ್ತರಕ್ಕೆ ಬೆಳೆಯಲಿ, ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿ, ಶೋಷಿತರ ಧಮನಿತರ ಧ್ವನಿಯಾಗಿ ನ್ಯಾಯ ಕೊಡಿಸುವವರು ಆಗಲಿ ಎಂದು ಆಶಿಸುತ್ತೇನೆ ಎಂದು ಹೇಳಿದರು.

ಪಕ್ಷದ ಗದಗ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನ್ವರ್ ಬಾಗೇವಾಡಿ ಅವರು ನೂತನವಾಗಿ ಆಯ್ಕೆಯಾದ ಗದಗ ವಿಧಾನಸಭಾ ಕ್ಷೇತ್ರ ಸಮಿತಿ ಅಧ್ಯಕ್ಷರಾದ ಅಫ್ಘಾನ್ ತಹಶೀಲ್ದಾರ ಹಾಗೂ ಶಿರಹಟ್ಟಿ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾದ ಇಸ್ಮಾಯಿಲ್ ನದಾಫ್ ಹಾಗೂ ಎಲ್ಲ ಪದಾಧಿಕಾರಿಗಳಿಗೆ ಅಭಿನಂದಿಸಿ ಎಲ್ಲರಿಗೂ ಧನ್ಯವಾದಗಳು ಅರ್ಪಿಸಿದರು.

# ಸದಸ್ಯರ ಹಿತ ಕಾಪಾಡುವದು ಸಂಘದ ಕೆಲಸ: ಶಾಸಕ ಸವದಿ

**ರಬಕವಿ-ಬನಹಟ್ಟಿ :** ಸಾಲ ಮರುಪಾವತಿಯ ಪ್ರಾಮಾಣಿಕತೆಯಿಂದ ಸಂಘದ ಅಭಿವೃದ್ಧಿಗೆ ಕಾರಣವಾಗಲಿದ್ದು , ಕಟ್ಟಕಡೆಯ ವ್ಯಕ್ತಿಯ ಬೆಳವಣಿಗೆಯೊಂದಿಗೆ ಸಂಘ ಪೂರಕವಾಗಿ ಸದಸ್ಯರ ಹಿತ ಕಾಪಾಡುವ ಕೆಲಸವಾಗಬೇಕೆಂದು ತೇರದಾಳ ಶಾಸಕ ಸಿದ್ದು ಸವದಿ ತಿಳಿಸಿದರು.

ನಗರದ ಸಿದ್ರಾಮೇಶ್ವರ ಸಮುದಾಯ ಭವನದಲ್ಲಿ ಸಿದ್ಧೇಶ್ವರ ಪತ್ತಿನ ಸಹಕಾರಿ ಸಂಘದ ಹನ್ನೊಂದನೇ ವಾರ್ಷಿಕ ಸರ್ವ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕಡಿಮೆ ಅವಧಿಯಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ 81 ಲಕ್ಷಕ್ಕೂ ಅಧಿಕ ಲಾಭ ಗಳಿಕೆ ಮಾಡಿದ್ದು ವಿಶೇಷ ಸಾಧನೆಯಾಗಿದೆ ಎಂದರು.

ಸಂಘದ ಅಧ್ಯಕ್ಷ ರಾಮಕಿಶನ್ ಲಡ್ಡಾ ಮಾತನಾಡಿ, 35 ಲಕ್ಷಕ್ಕೂ ಅಧಿಕ ಸರ್ಕಾರದ ಬಡ್ಡಿ ಸಹಾಯ ಧನ ನೇಕಾರರಿಗೆ ದೊರೆತಿದೆ. ನೇಕಾರರ ಅಭ್ಯುದಯಕ್ಕೆ ಸಂಘದ ಪರಿಶ್ರಮ ಮೆಚ್ಚುವಂಥದ್ದೆಂದರು. ಡಾ. ಎಸ್. ಎಸ್. ಹೂಲಿ ಮಾತನಾಡಿ ನೇಕಾರರಿಗೆ ಸಹಾಯ ಬಡ್ಡಿ ಧನ ದೊರಕುವಲ್ಲಿ ದಾಖಲಾತಿಯಲ್ಲಿ ಬದಲಾವಣೆಗೊಳಿಸಿ ಒಂಭತ್ತು ದಾಖಲೆಗಳನ್ನು ಒದಗಿಸಬೇಕಿದೆ. ಇದರಿಂದ ಶೇ.ಅರವತ್ತರಷ್ಟು ನೇಕಾರರು ಯೋಜನೆಯಿಂದ ದೂರ ಉಳಿದಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಲ್ಲಿ ಎಲ್ಲರೂ ಅರ್ಹರಾಗುವಂತೆ ಎಲ್ಲ ದಾಖಲೆಗಳನ್ನು ಒದಗಿಸುವಲ್ಲಿ ಯತ್ನಿಸಿ ಯೋಜನೆಯ ಪ್ರಯೋಜನ ಪಡೆದುಕೊಳ್ಳಬೇಕೆಂದರು.

ಇದೇ ಸಂದರ್ಭ ವಿಶೇಷ ಸಾಧಕರಿಗೆ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಗದಗ ನ್ಯಾಯಾಲಯದ ನ್ಯಾಯಾಧೀಶ ಜಿ. ಆರ್. ಶೆಟ್ಟರ್, ಎಂ. ಜಿ. ಕೆರೂರ, ಸಿದ್ರಾಮಪ್ಪ ಸವದತ್ತಿ, ಸುರೇಶ ಚಿಂಡಕ, ಡಾ. ಕೆ. ಡಿ. ಭದ್ರನ್ನವರ ಮಾತನಾಡಿದರು.

ಪರಪ್ಪ ಬಿಳ್ಳೂರ, ಶ್ರೀಶೈಲ ಉಳ್ಳಾಗಡ್ಡಿ, ಸಂಜೀವ ಚರ್ಕಿ, ಪರಸಪ್ಪ ಜಕ್ಕನ್ನವರ, ಶಾಂತವೀರ ಬೀಳಗಿ, ರಮೇಶ ಮಂಡಿ, ಸಂಗಪ್ಪ ನಾರವ್ವಗೋಳ, ಸಿದಗಿರೆಪ್ಪ ಸುಂಕದ, ಪರಶುರಾಮ ಪಾತ್ರೋಟ, ಶಿಲ್ಪಾ ಸಂಜೀವ ಬೆಳಗಲಿ, ದಾನವ್ವ ದುಂಡಪ್ಪ ಕರಲಟ್ಟಿ, ಸಾವಿತ್ರಿ ವೀರಪ್ಪ ತಳವಾರ, ವೀರಪ್ಪ ಹಲಗತ್ತಿ, ಶಿವಲಿಂಗಯ್ಯ ಕಡಪಟ್ಟಿ, ಸುರೇಶ ನಿಂಬರಗಿ, ಮಲ್ಲಪ್ಪ ಬೆಟಗೇರಿ, ಪ್ರಕಾಶ ಕೊಕಟನೂರ, ಚನ್ನಬಸಪ್ಪ ಜಾಲಿಗಿಡದ, ರವಿ ಜಿಡ್ಡಿಮನಿ, ಶಿವಕುಮಾರ ಜುಂಜಪ್ಪನವರ, ಜಗದೀಶ ಕುಚನೂರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ರನ್ನಬೆಳಗಲಿ ಪಟ್ಟಣ ಪಂಚಾಯ್ತಿ: ಪಕ್ಷೇತರರೇ ನಿರ್ಣಾಯಕ
# ಅಧಿಕಾರ ಗದ್ದುಗೆಗಾಗಿ ಕಾಂಗ್ರೆಸ್-ಬಿಜೆಪಿ ಸಮಬಲದ ಹೋರಾಟ

* ಚಂದ್ರಶೇಖರ ಮೋರೆ.



**ಮಹಾಲಿಂಗಪುರ:** ಸಮೀಪದ ರನ್ನಬೆಳಗಲಿ ಪಟ್ಟಣ ಪಂಚಾಯ್ತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರಾಜ್ಯ ಸರ್ಕಾರ ಮೀಸಲಾತಿ ಪ್ರಕಟಿಸಿದ್ದು, ಅಧಿಕಾರದ ಚುಕ್ಕಾಣಿಗಾಗಿ ಬಿಜೆಪಿ, ಕಾಂಗ್ರೆಸ್ ಮಧ್ಯೆ ಸಮಬಲದ ಹೋರಾಟ ನಡೆದಿದೆ.

ಅಧ್ಯಕ್ಷ ಸ್ಥಾನ ಹಿಂದುಳಿದ 'ಅ' ವರ್ಗ ಹಾಗೂ ಉಪಾಧ್ಯಕ್ಷ ಸ್ಥಾನ ಹಿಂದುಳಿದ 'ಬ' ವರ್ಗ ಮಹಿಳಾ ಮೀಸಲಾತಿ ಕಲ್ಪಿಸಲಾಗಿದೆ. ಒಟ್ಟು 18 ಸದಸ್ಯ ಬಲದ ಪಟ್ಟಣ ಪಂಚಾಯ್ತಿಯಲ್ಲಿ ಕಾಂಗ್ರೆಸ್ 8, ಬಿಜೆಪಿ 5 ಹಾಗೂ ಪಕ್ಷೇತರರ 5 ಸ್ಥಾನ ಹೊಂದಿದೆ. ಸದಸ್ಯರ ಸಂಖ್ಯಾಬಲದಿಂದ ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಸಮಬಲ ಸಾಧಿಸಿದ್ದರಿಂದ ಹಾಗೂ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ ಅವರ ಮುಧೋಳ ಮತಕ್ಷೇತ್ರದ ಪ್ರಮುಖ ಪಟ್ಟಣ ರನ್ನಬೆಳಗಲಿಯ ಪಪಂ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯು ತೀವ್ರ ಕುತೂಹಲ ಕೆರಳಿಸಿದೆ.

ಪಟ್ಟಣ ಪಂಚಾಯ್ತಿಗೆ ಮೇಲ್ದರ್ಜೆಗೇರಿದ ನಂತರ ರನ್ನಬೆಳಗಲಿಯಲ್ಲಿ ಎರಡನೇ ಬಾರಿ ಚುನಾವಣೆ ನಡೆದು 2021ರ ಡಿ.30 ರಂದು ಫಲಿತಾಂಶವೂ ಘೋಷಣೆಯಾಗಿತ್ತು.ಆದರೆ ಚುನಾವಣೆ ಮುಗಿದು ಎರಡೂವರೆ ವರ್ಷಗಳವರೆಗೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ನಿಗದಿಯಾಗಿರಲಿಲ್ಲ. ಇದರಿಂದ ಅಧಿಕಾರ ಇದ್ದರೂ ಅನುಭವಿಸದೇ ಇರುವ ಸ್ಥಿತಿ ನೂತನ ಸದಸ್ಯರದ್ದಾಗಿತ್ತು. ಇದೀಗ ಮೀಸಲಾತಿ ಪ್ರಕಟಗೊಂಡಿದ್ದರಿಂದ ಸದಸ್ಯರು ನಿಟ್ಟುಸಿರು ಬಿಟ್ಟಿದ್ದಾರೆ.

**ಕಾಂಗ್ರೆಸ್-ಬಿಜೆಪಿ ಸಮಬಲ:**

ಚುನಾವಣೆಯಲ್ಲಿ ಬಿಜೆಪಿ, ಕಾಂಗ್ರೆಸ್ ಪಕ್ಷಗಳು ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸದೇ ಬೆಂಬಲ ನೀಡಿದ್ದರಿಂದ ಐದು ಜನ ಪಕ್ಷೇತರರು ಆಯ್ಕೆಯಾಗಿದ್ದರು.ಈ ಪೈಕಿ ನಾಲ್ವರು ಬಿಜೆಪಿ, ಒಬ್ಬರು ಕಾಂಗ್ರೆಸ್ ಬೆಂಬಲ ಪಡೆದಿದ್ದಾರೆ.ತಾನು ಗಳಿಸಿರುವ 5 ಸ್ಥಾನ ಹಾಗೂ ಪಕ್ಷದ ಬೆಂಬಲ ಪಡೆದ 4 ಪಕ್ಷೇತರರು ಸೇರಿ 9 ಸ್ಥಾನ ಬಿಜೆಪಿ ಪಾಲಾಗುತ್ತವೆ. ಅದೇ ರೀತಿ ತಾನು ಗಳಿಸಿರುವ 8 ಸ್ಥಾನ ಹಾಗೂ ಪಕ್ಷದ ಬೆಂಬಲ ಪಡೆದ ಒಬ್ಬ ಪಕ್ಷೇತರ ಸೇರಿ 9 ಸ್ಥಾನ ಕಾಂಗ್ರೆಸ್ ಪಾಲಾಗುತ್ತವೆ.

ಅದೇ ರೀತಿ, ಮುಧೋಳ ಶಾಸಕರ ಮತಕಾಂಗ್ರೆಸ್ ಪಾಲಾದರೆ ಬಾಗಲಕೋಟೆ ಸಂಸದರ ಮತ ಬಿಜೆಪಿ ಪಾಲಾಗಲಿದೆ. ಸದಸ್ಯರ ಸಂಖ್ಯೆಯ ತಲಾ 9 ಹಾಗೂ ಶಾಸಕರ, ಸಂಸದರ ತಲಾ ಒಂದು ಮತ ಪಡೆದು ಬಿಜೆಪಿ, ಕಾಂಗ್ರೆಸ್ ತಲಾ 10 ಮತ ಹೊಂದಿ ಸಮಬಲ ಸಾಧಿಸಲಿವೆ.

**ಪಕ್ಷೇತರ ಸದಸ್ಯರೇ ನಿರ್ಣಾಯಕ :**

ಐದು ಜನ ಪಕ್ಷೇತರರಲ್ಲಿ ಒಬ್ಬರೇ ನಿಷ್ಠೆ ಬದಲಿಸಿ ಯಾವ ಪಕ್ಷಕ್ಕೆ ಬೆಂಬಲ ನೀಡುತ್ತಾರೋ ಆ ಪಕ್ಷ ಅಧಿಕಾರದ ಗದ್ದುಗೆ ಏರಲಿದೆ. ಸದ್ಯದ ಪರಿಸ್ಥಿತಿಯಲ್ಲಿ ಬಿಜೆಪಿ-ಕಾಂಗ್ರೆಸ್ ಪಕ್ಷಗಳು ಪಕ್ಷೇತರ ಬಲವಿಲ್ಲದೇ ಅಧಿಕಾರ ಗದ್ದುಗೆ ಏರುವದು ಅಸಾಧ್ಯವಾದ್ದರಿಂದ ಈಗ ಎಲ್ಲರ ಚಿತ್ತ ಪಕ್ಷೇತರ ಅಭ್ಯರ್ಥಿಗಳ ನಿರ್ಣಯದತ್ತ ಎನ್ನುವಂತಾಗಿದೆ.

**ಹೆಚ್ಚಿದ ಅಧ್ಯಕ್ಷ ಆಕಾಂಕ್ಷಿಗಳು :**

ಅಧ್ಯಕ್ಷ ಸ್ಥಾನಕ್ಕೆ ದ್ರಾಕ್ಷಾಯಿಣಿ ಮಹಾದೇವ ಮುರನಾಳ (ಕಾಂಗ್ರೆಸ್), ಮುತ್ತಪ್ಪ ತಮ್ಮಣ್ಣಪ್ಪ ಕುಂಬಾಳಿ (ಪಕ್ಷೇತರ), ಮುಬಾರಕ ಮಲ್ಲಿಕಸಾಬ ಅತ್ತಾರ (ಕಾಂಗ್ರೆಸ್), ನೀಲಕಂಠ ತಮ್ಮಣ್ಣಪ್ಪ ಸೈದಾಪುರ (ಕಾಂಗ್ರೆಸ್), ಗೌರವ್ವ ಸಂಗಪ್ಪ ಅಮಾತಿ (ಕಾಂಗ್ರೆಸ್), ರೂಪಾ ಸದಾಶಿವ ಹೊಸಟ್ಟಿ (ಬಿಜೆಪಿ) ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸಹನಾ ಸಿದ್ದು ಸಾಂಗಲೀಕರ (ಕಾಂಗ್ರೆಸ್),ಕಾಶವ್ವ ಬಸವರಾಜ ಪುರಾಣಿಕ (ಬಿಜೆಪಿ) ಸ್ಪರ್ಧೆಯಲ್ಲಿದ್ದಾರೆ.

**ಹೊಂದಾಣಿಕೆ ಸಾಧ್ಯತೆ? :**

ಸಂಖ್ಯಾದೃಷ್ಟಿಯಿಂದ ಸಮಬಲ ಇರುವುದರಿಂದ ಕುದುರೆ ವ್ಯಾಪಾರ, ರೆಸಾರ್ಟ್ ರಾಜಕಾರಣದ ಗೊಡವೆಗೆ ಹೋಗದೇ ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಹೊಂದಾಣಿಕೆ ರಾಜಕಾರಣಕ್ಕೆ ಮೊರೆ ಹೋಗಬಹುದು.ಎರಡು ಅವಧಿಗೆ ಅನುಗುಣವಾಗಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳನ್ನು ಎರಡೂ ಪಕ್ಷದ ಒಬ್ಬೊಬ್ಬ ಸದಸ್ಯರಿಗೆ ಅವಕಾಶ ನೀಡುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

**ಇಬ್ಬರು ಕಾಂಗ್ರೆಸ್ ಸದಸ್ಯರ ಕೂತಹಲ ನಡೆ:**

ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಗೆ ಇನ್ನು ದಿನಾಂಕ ನಿಗದಿಯಾಗಿಲ್ಲ. ಮೀಸಲಾತಿ ಪ್ರಕಟವಾಗುತ್ತಿದ್ದಂತೆ ಬಿಜೆಪಿ ಪಕ್ಷದ 5 ಸದಸ್ಯರು, ಪಕ್ಷೇತರ ಮೂವರು ಸೇರಿ 8 ಜನರ ಒಂದು ಪ್ರವಾಸಕ್ಕೆ ತೆರಳಿದೆ. ಅದೇ ರೀತಿ ಕಾಂಗ್ರೆಸ್ ಪಕ್ಷದ 6 ಸದಸ್ಯರು, ಪಕ್ಷೇತರ ಇಬ್ಬರು ಸೇರಿ 8 ಜನ ಕಾಂಗ್ರೆಸ್ ಸದಸ್ಯರ ಮತ್ತೊಂದು ತಂಡವು ಪ್ರವಾಸಕ್ಕೆ ತೆರಳಿದೆ.

ಆದರೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಗಳಾದ ದ್ರಾಕ್ಷಾಯಿಣಿ ಮಹಾದೇವ ಮುರನಾಳ (ಅಧ್ಯಕ್ಷ), ಸಹನಾ ಸಿದ್ದು ಸಾಂಗಲೀಕರ (ಉಪಾಧ್ಯಕ್ಷ), ಈ ಇಬ್ಬರು ಕಾಂಗ್ರೆಸ್ ಸದಸ್ಯರು ಪಟ್ಟಣದಲ್ಲಿಯೇ ಉಳಿದಿದ್ದಾರೆ.

ಇವರಿಬ್ಬರ ಅಂತಿಮ ನಡೆ ಏನಾಗಿರುತ್ತದೆ ಎಂಬುವದು ಮತ್ತಷ್ಟು ಕೂತುಹಲಕ್ಕೆ ಕಾರಣವಾಗಿದೆ. ಚುನಾವಣೆಯ ದಿನಾಂಕ ನಿಗದಿಯ ಬಳಿಕವೇ ಸ್ಪಷ್ಟತೆ ಸಿಗಲಿದೆ ಎನ್ನಲಾಗುತ್ತಿದೆ.

# ಅಪ್ರಾಪ್ತ ವಯಸ್ಸಿನ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪಿಗೆ ಶಿಕ್ಷೆ

**ಕೊಪ್ಪಳ :** ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಬಸವರಾಜ ಮುದ್ಲಾಪೂರ ಇತನ ಮೇಲಿನ ಆರೋಪ ಸಾಭಿತಾಗಿದೆ ಎಂದು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯ(ಪೋಕ್ಸೊ)ವು ಆರೋಪಿಗೆ ಶಿಕ್ಷೆ ವಿಧಿಸಿದೆ.

2022ರ ಮಾರ್ಚ್ 20ರಂದು ಕುಕನೂರ ಪೊಲೀಸ್ ಠಾಣೆ ವ್ಯಾಪ್ತಿಯ ಲಕಮಾಪುರ ಗ್ರಾಮದ ಬಾಧಿತಳ ತಾಯಿಯ ಮನೆಯಿಂದ ಆರೋಪಿ ಬಸವರಾಜ ಇತನು ಬಾಧಿತಳನ್ನು ಪುಸಲಾಯಿಸಿ ಅಪಹರಿಸಿಕೊಂಡು ಹೋಗಿ ರಾತ್ರಿ 8.30 ಗಂಟೆ ಸುಮಾರಿಗೆ ಲಕಮಾಪುರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಮುಂದಿರುವ ಓಣಿಯ ಒಂದು ಪಾಳು ಬಿದ್ದ ಮನೆಯ ಮುಂದೆ ರಸ್ತೆಯ ಮೇಲೆ ಬಾಧಿತಳು ಅಪ್ರಾಪ್ತಳು ಎಂಬುದು ಗೊತ್ತಿದ್ದರೂ ಅವಳಿಗೆ ಬಲವಂತದ ಅತ್ಯಾಚಾರ ಮಾಡಿರುವ ಆರೋಪದ ಹಿನ್ನೆಲೆಯಲ್ಲಿ ಕುಕನೂರ ಪೋಲಿಸರು ಪ್ರಕರಣ ದಾಖಲಿಸಿಕೊಂಡು ಪ್ರಕರಣದ ತನಿಖೆಯನ್ನು ಯಲಬುರ್ಗಾ ಸಿಪಿಐ ಎಂ.ನಾಗರೆಡ್ಡಿ ಅವರು ನಿರ್ವಹಿಸಿದ್ದು, ತನಿಖೆಯಲ್ಲಿ ಆರೋಪಿತನ ಮೇಲಿನ ಆರೋಪಣೆಗಳು ಮೇಲ್ನೋಟಕ್ಕೆ ಸಾಭಿತಾಗಿದ್ದರಿಂದ ಆರೋಪಿತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣವು ಸ್ಪೇ.ಎಸ್‌ಸಿ(ಪೋಕ್ಸೊ) ಸಂ: 26/2022 ರಲ್ಲಿ ದಾಖಲಾಗಿದ್ದು, ವಿಚಾರಣೆಯನ್ನು ನಡೆಸಿದ ನ್ಯಾಯಾಲಯವು ಆರೋಪಿ ಬಸವರಾಜ ಮುದ್ಲಾಪುರ ಇತನ ಮೇಲಿನ ಆರೋಪಣೆಗಳು ಸಾಭೀತಾಗಿವೆ ಎಂದು 20 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ.20,000ಗಳ ದಂಡವನ್ನು ಭರಿಸುವಂತೆ ಆದೇಶಿಸಿ, ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಧೀಶರಾದ(ಪೋಕ್ಸೊ) ಕುಮಾರ ಡಿ.ಕೆ ಅವರು 2024ರ ಜುಲೈ 30ರಂದು ತೀರ್ಪು ಹೊರಡಿಸಿರುತ್ತಾರೆ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State